RNI: KNKAN/ 25/A5387 | ಸಂಪಾದಕರು: ರಾಜೇಶ್ವರಿ ಎಸ್. ಓಲೇಕಾರ | ಸಿಇಒ: ಚಂದ್ರಶೇಖರ ಎಸ್.ಕೆ. | ಸಹ ಸಂಪಾದಕರು: ಶಿವಕುಮಾರ

# ಸಮಾಲೋಚನೆ ಸುದ್ದಿ

ಕನ್ನಡ ದಿನ ಪತ್ರಿಕೆ

ನೇರ ನಿಖರ ನಿರ್ದಿಷ್ಟ

ಮೊ.ನಂ: 8095203132 PMG/KA/NK/HVR-59/2026-28 SAMALOCHANE RANEBENNURSUDDI Kannada Daily Morning

ಸಹಜ ಕೃಷಿಯ ಪವಾಡ: ಬರದಲ್ಲೂ ಉತ್ತಮ ಫಸಲು! 2

ಬ್ಯಾಡಗಿಯಲ್ಲಿ ಮಟ್ಕಾ–ಇಸ್ಪೀಟ್ ದಂಧೆಗಿಲ್ಲ ಬ್ರೇಕ್ 3

ಕೊಪ್ಪಳ ಜಿಲ್ಲೆಯಲ್ಲಿ ಕೃಷಿ ಹೊಂಡಗಳ ನಿರ್ಮಾಣ, ರೈತರಿಗೆ ವರದಾನ 4

ಸಂಪುಟ (Volume): 1 ಸಂಚಿಕೆ (Issue): 184 ಪುಟ (Page): 4 ದರ Rs. 2 ಶುಕ್ರವಾರ 25 ಸೆಪ್ಟೆಂಬರ್ 2026 ● 25 SEPTEMBER 2026 ಹಾವೇರಿ ಧಾರವಾಡ ಗದಗ ಕೊಪ್ಪಳ ವಿಜಯನಗರ ಬೆಳಗಾವಿ ಉತ್ತರ ಕನ್ನಡ samalochanersuddi@gmail.com

# ಜ್ಞಾನೇಶ್‌ಕುಮಾರ್ 48 ಗಂಟೆಗಳಲ್ಲಿ ರಾಜೀನಾಮೆ ನೀಡಲಿ

## ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿ ಅಕ್ರಮ ಆರೋಪ | ಅಭಿಜಿತ್ ದಿಪ್ಕೆ ಎಚ್ಚರಿಕೆ

**ದೆಹಲಿ:** ಚುನಾವಣೆ ಆಯೋಗ ಮತ್ತು ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಪ್ರಕ್ರಿಯೆಯಲ್ಲಿನ ಅಕ್ರಮಗಳ ಆರೋಪದ ಹಿನ್ನೆಲೆಯಲ್ಲಿ, ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು 48 ಗಂಟೆಗಳ ಒಳಗೆ ತಮ್ಮ ಹುದ್ದೆಗೆ ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ಕಾ–ಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ದೇಶಾದ್ಯಂತ ತೀವ್ರ ಹೋರಾಟ ನಡೆಸಲಿದೆ ಎಂದು ಅಭಿಜಿತ್ ದಿಪ್ಕೆ ಎಚ್ಚರಿಕೆ ನೀಡಿದ್ದಾರೆ.

ರಾಷ್ಟ್ರ ರಾಜಧಾನಿ ಹೊಸದಿಲ್ಲಿಯಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಸಿಜೆಪಿ ಸಂಸ್ಥಾಪಕ ಅಭಿಜಿತ್ ದಿಪ್ಕೆ, "ಜ್ಞಾನೇಶ್ ಕುಮಾರ್ ಅವರು ಈ ದೇಶದ ಅತಿದೊಡ್ಡದೇಶದ್ರೋಹಿ"ಎಂದುಆರೋಪಮಾಡಿದ್ದಾರೆ. ಸಾಂಸ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿರುವ ಚುನಾವಣಾ ಆಯೋಗ ಈಗ ಪ್ರತಿಪಕ್ಷಗಳ ಆಕ್ರೋಶಕ್ಕೆ ಗುರಿಯಾಗಿದೆ.

"ಜ್ಞಾನೇಶ್ ಕುಮಾರ್ ಬಿಜೆಪಿ ಸೂಚನೆಯ ಮೇರೆಗೆ ಮತದಾರರ ಪಟ್ಟಿಯಿಂದ ಮತದಾರರ ಹೆಸರನ್ನು ಉದ್ದೇಶಪೂರ್ವಕವಾಗಿ ತೆಗೆದುಹಾಕಿದ್ದಾರೆ. ಎಲ್ಲಾ ರಾಜ್ಯಗಳಲ್ಲಿಯೂವಿರೋಧಪಕ್ಷಗಳನ್ನುಹತ್ತಿಕ್ಕುವನಿಟ್ಟಿನಲ್ಲಿ ಚುನಾವಣಾ ಆಯೋಗವು ಕಾರ್ಯನಿರ್ವಹಿಸುತ್ತಿದೆ" ಎಂದು ಸಿಜೆಪಿ ತೀವ್ರ ವಾಗ್ದಾಳಿ ನಡೆಸಿದೆ.





**ಬಿಜೆಪಿ ಗೆಲುವಿಗೆ ಸಿಇಸಿ ಕಾರಣ:** "ಬಿಜೆಪಿಯ ಚುನಾವಣಾ ಗೆಲುವುಗಳ ಹಿಂದಿನ ನಿಜವಾದ ಶಕ್ತಿ ಸಿಇಸಿ ಜ್ಞಾನೇಶ್ ಕುಮಾರ್. ಬಿಜೆಪಿಯ ಈ ಸಾಧನೆಯ ನಿಜವಾದ ರೂವಾರಿ ಅವರೇ ಆಗಿದ್ದಾರೆ. ಜ್ಞಾನೇಶ್ ಕುಮಾರ್ ಅವರ ನೇಮಕಾತಿಯ ನಂತರ ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಹರಿಯಾಣ, ಅಸ್ಸಾಂ ಮತ್ತು ಇತರ ರಾಜ್ಯಗಳಲ್ಲಿ ಬಿಜೆಪಿಯ ಮತಗಳ ಪ್ರಮಾಣ ಹೆಚ್ಚಾಗಿದೆ" ಎಂದು ಅಭಿಜಿತ್ ದಿಪ್ಕೆ ಆರೋಪಿಸಿದ್ದಾರೆ.

### ಸಿಜೆಪಿ ಮೂರು ಬೇಡಿಕೆಗಳು

1. ಜ್ಞಾನೇಶ್ ಕುಮಾರ್ ಅವರ ರಾಜೀನಾಮೆ ಪಡೆದು ಅವರ ವಿರುದ್ಧ ಕ್ರಿಮಿನಲ್ ಕ್ರಮ ಜರುಗಿಸುವುದು.
2. ಪೂರ್ವ–ಎಸ್‌ಐಆರ್ ಮತದಾರರ ಪಟ್ಟಿಯನ್ನು (ಜನವರಿ 2025) ಹಿಂಪಡೆಯುವುದು.
3. ಚುನಾವಣಾ ಆಯುಕ್ತರ ನೇಮಕಾತಿಗೆ ಸಂಬಂಧಿಸಿದ 2023ರ ಕಾನೂನನ್ನು ರದ್ದುಗೊಳಿಸುವುದು.

"ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಮತ್ತು ವಿವೇಕ್ ಜೋಶಿ ಅವರು, ಕಳೆದ 10 ತಿಂಗಳುಗಳಲ್ಲಿ ಚುನಾವಣಾ ಆಯೋಗದ ನಿರ್ಧಾರಗಳು ಮತ್ತು ಆದೇಶಗಳ ವಿರುದ್ಧ ಕನಿಷ್ಠ 14 ಬಾರಿ ಔಪಚಾರಿಕವಾಗಿ ಆಕ್ಷೇಪ ವ್ಯಕ್ತಪಡಿಸಿದ್ದರು" ಎಂಬ ವರದಿಗಳ ಬಳಿಕ, ವಿಪಕ್ಷಗಳು ಒಟ್ಟಾಗಿ ಮುಖ್ಯ ಚುನಾವಣಾ ಆಯುಕ್ತ ಅಭಿಜಿತ್ ದಿಪ್ಕೆ ವಿರುದ್ಧ ಮುಗಿಬಿದ್ದಿವೆ.

ವಿರೋಧ ಪಕ್ಷಗಳು ಖಖಖ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು ಹಾಗೂ ಜ್ಞಾನೇಶ್ ಕುಮಾರ್ ಅವರನ್ನು ಪದಚ್ಯುತಗೊಳಿಸಿ ಬಂಧಿಸಬೇಕು ಎಂದು ಪಟ್ಟು ಹಿಡಿದಿವೆ. ಜ್ಞಾನೇಶ್ ಕುಮಾರ್ ಅವರಿಗೆ ಗುಂಡಿಕ್ಕಲು ಬಯಸಿರುವುದಾಗಿ ಮುಕೇಶ್ ಸಹಾನಿ ಹೇಳಿಕೆ ನೀಡಿದ್ದು, ಇದು ತೀವ್ರ ವಿವಾದವನ್ನೂ ಸೃಷ್ಟಿಸಿದೆ.

**ಚುನಾವಣಾ ಆಯೋಗದ ಸ್ಪಷ್ಟನೆ:** SIR ಪ್ರಕ್ರಿಯೆಗೆ ಸಂಬಂಧಿಸಿದಂತೆ ಆಂತರಿಕ ಭಿನ್ನಮತವಿಲ್ಲ ಎಂದು ಚುನಾವಣಾ ಆಯೋಗ ಸ್ಪಷ್ಟನೆ ನೀಡಿದೆ. ಆದಾಗ್ಯೂ, ಈ ಕುರಿತು ಪ್ರಕಟವಾಗಿರುವ ವರದಿಗಳನ್ನು ಆಧರಿಸಿ ಪ್ರತಿಪಕ್ಷಗಳು ಮುಖ್ಯ ಚುನಾವಣಾ ಆಯುಕ್ತರನ್ನು ಗುರಿಯಾಗಿಸಿಕೊಂಡಿವೆ. ಲೋಕಸಭೆ ಪ್ರತಿಪಕ್ ನಾಯಕ ರಾಹುಲ್ ಗಾಂಧಿ, ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್, ಪಶ್ಚಿಮ ಬಂಗಾಳ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಶಿವಸೇನೆ (ಯುಬಿಟಿ) ಸಂಸದ ಸಂಜಯ್ ರಾವತ್ ಸೇರಿದಂತೆ, ಹಲವು ಪ್ರಮುಖ ಪ್ರತಿಪಕ್ಷ ನಾಯಕರು, ಜ್ಞಾನೇಶ್ ಕುಮಾರ್ ರಾಜೀನಾಮೆಗೆ ಪಟ್ಟುಹಿಡಿದಿದ್ದಾರೆ.

# 6 ತಿಂಗಳಲ್ಲಿ 16 ಸಾವಿರ ಸಾವು

## ಸೂಪರ್ ಎಲ್‌ನಿನೋ ಎಫೆಕ್ಟ್ | ಅಮೆರಿಕದ ಲ್ಯಾಬ್ ಅಧ್ಯಯನ ವರದಿ

**ದೆಹಲಿ:** ಸೂಪರ್ ಎಲ್–ನಿನೋ (SuperElNiño) ಎಫೆಕ್ಟ್, ಭಾರತವೂ ಸೇರಿದಂತೆ ಜಾಗತಿಕವಾಗಿ ಬಹುವಾಗಿ ಕಾಡಲಿದೆ ಎನ್ನುವ ಅಧ್ಯಯನದ ವರದಿಯೊಂದು ಹೊರಬಿದ್ದಿದೆ. ಈ ವರದಿಯ ಪ್ರಕಾರ, ಮುಂದಿನ ಆರು ತಿಂಗಳಲ್ಲಿ ಭಾರತದಲ್ಲಿ ತಾಪಮಾನ ಬದಲಾವಣೆಯಿಂದ ಹದಿನಾರು ಸಾವಿರಕ್ಕೂ ಹೆಚ್ಚು ಸಾವು ಸಂಭವಿಸಬಹುದು.

ಅಮೆರಿಕದ ಕ್ಲೈಮೇಟ್ ಇಂಪ್ಯಾಕ್ಟ್ ಲ್ಯಾಬ್ ಅಧ್ಯಯನದ ಪ್ರಕಾರ, ಎಲ್–ನಿನೋ ಎಫೆಕ್ಟ್ ಇದಕ್ಕೆ ಕಾರಣ. ಸಾಮಾನ್ಯ ವರ್ಷಕ್ಕೆ ಹೋಲಿಸಿದರೆ, ಸೆಪ್ಟೆಂಬರ್ 2026 – ಫೆಬ್ರವರಿ 2027ರ ಅವಧಿಯಲ್ಲಿ ಭಾರತದಲ್ಲಿ ತಾಪಮಾನಕ್ಕೆ ಸಂಬಂಧಿಸಿದಂತೆ, ಸುಮಾರು 15,800 ಸಾವು ಸಂಭವಿಸಬಹುದು ಎನ್ನುವ ಮುನ್ಸೂಚನೆಯನ್ನು ಅಮೆರಿಕದ ಚಿಕಾಗೋ ವಿಶ್ವವಿದ್ಯಾಲಯದ ಎನರ್ಜಿಪಾಲಿಸಿಇನ್ಸ್ಟಿಟ್ಯೂಟ್‌ಸಂಶೋಧನಾವಿಭಾಗದಕ್ಲೈಮೇಟ್ ಇಂಪ್ಯಾಕ್ಟ್ ಲ್ಯಾಬಿನ ಅಧ್ಯಯನ ವರದಿಯಲ್ಲಿ ಉಲ್ಲೇಖವಾಗಿದೆ.

**ಉಷ್ಣತೆಯ ತೀವ್ರತೆಯು ಹವಾಮಾನ ಬದಲಾವಣೆಗೆ ಕಾರಣವಾಗಲಿದೆ:** ಜಾಗತಿಕವಾಗಿ ಭೂತಾಪಮಾನವು ಸಾಮಾನ್ಯಕ್ಕಿಂತ 1.2 ಡಿಗ್ರಿ ಸೆಲ್ಸಿಯಸ್‌ನಷ್ಟು ಹೆಚ್ಚಿಸುವ ಉಷ್ಣತೆಯ ತೀವ್ರತೆಯು ಹವಾಮಾನ ಬದಲಾವಣೆಗೆ ಕಾರಣವಾಗಲಿದೆ. ಇಪ್ಪತ್ತು ವರ್ಷಗಳ ನಂತರ ಬರಬಹುದು ಎಂದು ಅಂದಾಜಿಸಲಾಗಿದ್ದ ತಾಪಮಾನದ ಈ ಪರಿಸ್ಥಿತಿ ಈಗಲೇ ಬರಲಿದೆ. ಬಿಸಿಲಿನ ದಿನಗಳನ್ನು ಶೇ. 44ರಷ್ಟು ಇದು ಹೆಚ್ಚಿಸಲಿದೆ ಎಂದು ವರದಿಯಲ್ಲಿ ಹೇಳಲಾಗಿದೆ. ಜಾಗತಿಕ ಮಟ್ಟದಲ್ಲಿ, ಒಟ್ಟಾ–ರೆಯಾಗಿ 4,50,000ಕ್ಕೂ ಹೆಚ್ಚು ಸಾವು ಸಂಭವಿಸಬಹುದು ಮತ್ತು ಭಾರತ, ನಾಲ್ಕನೇ ಅತಿಹೆಚ್ಚು ಹೊಡೆತ ಬೀಳುವ ದೇಶವಾಗಿದೆ.

**ನೈಜೀರಿಯಾ, ಸುಡಾನ್ ಮುಂತಾದ ದೇಶಗಳಲ್ಲಿ ಇದರ ಪ್ರಭಾವ ಹೆಚ್ಚು:** 4,50,000 ಪೈಕಿ ಸುಮಾರು 2,40,000 ಸಾವುಗಳು ಸೆಪ್ಟೆಂಬರ್ 2026 – ಫೆಬ್ರವರಿ 2027ರ ಅವಧಿಯಲ್ಲಿ ಸಂಭವಿಸಲಿದೆ. ನೈಜೀರಿಯಾ, ಸುಡಾನ್ ಮುಂತಾದ ದೇಶಗಳಲ್ಲಿ ಇದರ ಪ್ರಭಾವ ಹೆಚ್ಚಾಗಲಿದೆ. ಎಲ್–ನಿನೋಎನ್ನುವುದು ಈಕ್ವೆಡಾರ್, ಪೆರು ದೇಶದ ಪೆಸಿಫಿಕ್ ಮಹಾಸಾಗರದ ಅಸಹಜ ಉಷ್ಣತೆಗೆ ಕಾರಣವಾಗಿರುವ ಹವಾಮಾನ ಪ್ರಕ್ರಿಯೆಯಾಗಿದೆ. ಇದು ಭಾರತದ ಮುಂಗಾರಿನ ಮೇಲೆ ಪರಿಣಾಮವನ್ನು ಬೀರಿ ಉಷ್ಣಾಂಶವನ್ನು ಹೆಚ್ಚಿಸುತ್ತದೆ.



**ಎಲ್ಲಾ ಕಡೆ ಇದರ ಪ್ರಭಾವ ಕಮ್ಮಿಯಾದರೂ, ಭಾರತದಲ್ಲಿ ಕಮ್ಮಿಯಾಗುವುದಿಲ್ಲ:** "ಭಾರತದಲ್ಲಿ, ಸಾವಿನ ಪ್ರಮಾಣವು ಆರಂಭದಲ್ಲೇ ಗರಿಷ್ಠ ಮಟ್ಟವನ್ನು ತಲುಪುವ ಬದಲು ಹಂತಹಂತವಾಗಿ ಹೆಚ್ಚಾಗಲಿದೆ. ಡಿಸೆಂಬರ್ 2026 – ಫೆಬ್ರವರಿ 2027ರ ಅವಧಿಯಲ್ಲಿ ಸುಮಾರು 7,400ಕ್ಕೂ ಸಾವು ಸಂಭವಿಸಬಹುದು. ಇತರ ಪ್ರದೇಶಗಳಲ್ಲಿ ಇದರ ಭೀಕರತೆ ಕಡಿಮೆಯಾಗುತ್ತಾ ಬಂದರೂ, ಭಾರತದಲ್ಲಿ ಇದರ ಅಪಾಯ ಕಮ್ಮಿಯಾಗುವುದಿಲ್ಲ" ಎಂದು ವರದಿಯನ್ನು ಸಿದ್ಧ ಪಡಿಸಿದ ಮೈಕಲ್ ಗ್ರೀನ್‌ಸ್ಟೋನ್, ಜೆನೆವಿವ್ ಮಾರಿಕಲ್, ಗ್ರೋವರ್ ಕೊಪೆಕ್ ಅಭಿಪ್ರಾಯ ಪಟ್ಟಿದ್ದಾರೆ.

**ನೈಜೀರಿಯಾ, ಸುಡಾನ್ ಮುಂತಾದ ದೇಶಕ್ಕೆ ಇನ್ನೂ ಹಾನಿ ಜಾಸ್ತಿ:** ಎಲ್–ನಿನೋದಿಂದ ಹೆಚ್ಚು ಹಾನಿಗೊಳಗಾವ ದೇಶಗಳ ಪಟ್ಟಿಯಲ್ಲಿ ನೈಜೀರಿಯಾ, ಇಂಡೋನೇಷ್ಯಾ ಮತ್ತು ಸುಡಾನ್ ಮೊದಲಮೂರುಸ್ಥಾನದಲ್ಲಿದೆ.ನಂತರದಸ್ಥಾನದಲ್ಲಿಭಾರತವಿದೆ. ಫಿಲಿಪೈನ್ಸ್, ವಿಯೆಟ್ನಾಂ, ಥೈಲ್ಯಾಂಡ್, ಕಾಂಬೋಡಿಯಾ ಒಳಗೊಂಡಂತೆ ಆಗ್ನೇಯ ಏಷ್ಯಾ ಭಾಗದಲ್ಲಿ ಒಟ್ಟಾರೆಯಾಗಿ 19,400ಕ್ಕೂ ಹೆಚ್ಚು ಸಾವುಗಳು ಸಂಭವಿಸಬಹುದು ಎಂದು ಅಂದಾಜಿಸಲಾಗಿದೆ.

ತಮ್ಮ ಈ ವರದಿಗೆ 'Postcard From The Future' ಎಂದು ಹೆಸರಿಟ್ಟಿರುವ ಅಧ್ಯಯನದ ವರದಿ ಸಿದ್ಧ ಪಡಿಸಿದವರು, ದೀರ್ಘಾವಧಿಯ ಈ ಹವಾಮಾನ ಬದಲಾವಣೆಗೆ ಸಂಬಂಧಿಸಿದಂತೆ, ಸಾವುಗಳು ಸಂಭವಿಸಿದ ನಂತರ ಕ್ರಮ ತೆಗೆದುಕೊಳ್ಳುವ ಬದಲು, ಮುಂಚಿತವಾಗಿಯೇ ಈ ವೈಪರೀತ್ಯವನ್ನು ತಡೆಗಟ್ಟಲು ಕ್ರಮಗಳನ್ನು ತೆಗೆದುಕೊಳ್ಳಲು ಈ ವರದಿ, ಉಪಯೋಗವಾಗಲಿದೆ ಎಂದು ಲೇಖಕರು ಪ್ರತಿಪಾದಿಸಿದ್ದಾರೆ.

# ಯಮುನಾ ಎಕ್ಸ್‌ಪ್ರೆಸ್‌ವೇನಲ್ಲಿ ಬೆಂಕಿ, 9 ಪ್ರಯಾಣಿಕರು ಸಜೀವ ದಹನ

**ನೋಯ್ಡಾ:** ದೆಹಲಿಯಿಂದ ಮಹೋಬಾಗೆ ಚಲಿಸುತ್ತಿದ್ದ ಬಸ್, ಜೇವಾರ್ ಬಳಿಯ ಯಮುನಾ ಎಕ್ಸ್‌ಪ್ರೆಸ್‌ವೇನಲ್ಲಿ ಬೆಂಕಿ ಹತ್ತಿಕೊಂಡಿದ್ದು, 9 ಮಂದಿ ಪ್ರಯಾಣಿಕರು ಬೆಂ–ಕಿಗೆ ಬಲಿಯಾಗಿ ಮೃತಪಟ್ಟಿದ್ದಾರೆ. ಈ ಘಟನೆ ಬುಧವಾರ ರಾತ್ರಿ ಸಂಭವಿಸಿದ್ದು, ಬದುಕುಳಿದ ಇತರ ಪ್ರಯಾಣಿಕರಿಗೆ ಬೆಂಕಿಯಿಂದ ಗಾಯಗೊಂಡಿದ್ದು, ಸ್ಥಳೀಯ ಕೈಲಾಶ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ರಾಜ್ ಕಲ್ಪನಾ ಟ್ರಾವೆಲ್ಸ್‌ಗೆ ಸೇರಿದ ಬಸ್ ದೆಹಲಿಯಿಂದ ಆಗ್ರಾ ಕಡೆಗೆ ಚಲಿಸುತ್ತಿತ್ತು. ರಾತ್ರಿ ಸುಮಾರು 11:30 ಕ್ಕೆ ಈ ಗಟನೆ ಸಂಭವಿಸಿದೆ. ದೂರುದಾರ ಹಮಿರ್‌ಪುರ ನಿವಾಸಿ ಸುನಿಲ್ ಕುಮಾರ್ ಪ್ರಕಾರ, ಬಸ್‌ನಲ್ಲಿ ಸುಮಾರು 30–35 ಪ್ರಯಾಣಿಕರಿದ್ದರು. ಡ್ರೈವರ್ ಕ್ಯಾಬಿನ್ ಕಡೆಯಿಂದ ಮೊದಲು ಬೆಂಕಿ ಸುಟ್ಟ ವಾಸನೆ ಬಂದಿದೆ. ಪ್ರಯಾಣಿಕರು ಇದನ್ನು ಡ್ರೈವರ್ ಹಾಗೂ ಕಂಡಕ್ಟರ್ ಗಮನಕ್ಕೆ ತಂದರೂ ಅವರು ನಿರ್ಲಕ್ಷಿಸಿ ಬಸ್ ನಿಲ್ಲಿಸದೆ , ಸುಟ್ಟ ವಾಸನೆಗೆ ಗಮನವೂ ಕೊಡದೆ ಮುಂದೆ ಹೋಗಿದ್ದಾರೆ.

ಅಲ್ಲದೆ ಡ್ರೈವರ್ ಹಾಗೂ ಕಂಡಕ್ಟರ್ ಬಸ್‌ನೊಳಗೆ ಧೂಮಪಾನ ಮಾಡುತ್ತಿದ್ದರು ಎಂದು ದೂರುದಾರ ಆರೋಪಿಸಿದ್ದಾರೆ. ಬೆಂಕಿ ತಕ್ಷಣವೇ ಡ್ರೈವರ್ ಸೀಟ್ ಬಳಿ ಹತ್ತಿಕೊಂಡಿದ್ದು, ತಕ್ಷಣವೇ ಇಡೀ ಬಸ್‌ಗೆ ಆವರಿಸಿದೆ. ಡ್ರೈವರ್‌ಗೆ ಎಷ್ಟೇ ಭಾರಿ ಬಸ್ ನಿಲ್ಲಿಸುವಂತೆ ಮನವಿ ಮಾಡಿದರೂ, ನಿರ್ಲಕ್ಷಿಸಿದ ಹಿನ್ನೆಲೆ 9 ಮಂದಿಯ ಜೀವ ಬಲಿಯಾಗಿದೆ ಎಂದು ಆರೋಪಿಸಲಾಗಿದೆ.

ಬೆಂಕಿ ಹತ್ತಿ ಉರಿಯುತ್ತಿದ್ದಂತೆ, ಇಡೀ ಬಸ್ ತುಂಬ ಹೊಗೆಆವರಿಸಿಕೊಂಡು,ಪ್ರಯಾಣಿಕರಿಗೆ ಉಸಿರುಗಟ್ಟಿದೆ. ಸುನಿಲ್ ಹಾಗೂ ಕೆಲವರು ಬಸ್ ಹೊರಗೆ ಹಾರಿ ಎಸ್ಕೇಪ್ ಆಗಿದ್ದು, ಉಳಿದವರು, ಹೊಗೆ ಹಾಗೂ ಬೆಂಕಿಗೆ ಬಲಿಯಾಗಿದ್ದಾರೆ. ವೈದ್ಯರನ್ನು ಸಂಪರ್ಕಿಸುವಷ್ಟರಲ್ಲಿ ಉಸಿರುಗಟ್ಟಿ 9 ಮಂದಿ ಮೃತಪಟ್ಟಿರುವುದನ್ನು ವೈದ್ಯರು ಘೋಷಣೆ ಮಾಡಿದ್ದಾರೆ. ಬಸ್‌ನಲ್ಲಿದ್ದ ಲಗೇಜ್, ಫೋನ್, ಪ್ರಯಾಣಿಕರ ಎಲ್ಲಾ ವಸ್ತುಗಳು ಸುಟ್ಟು ಕರಕಲಾಗಿದೆ. ಬಸ್ ಮೇಲೆ ಹಾಗೂ ಲಗೇಜ್ ಕಂಪಾರ್ಟ್ ಮೆಂಟ್ ನಲ್ಲಿದ್ದ ಲಗೇಜ್‌ಗಳು ಸುಟ್ಟುಹೋಗಿವೆ.

ದೂರಿನ ಆಧಾರದಲ್ಲಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಬಸ್ ನಿಂದ ಬಚಾವಾದ ಪ್ರಯಾಣಿಕರ ಹೇಳಿಕೆಗಳನ್ನೂ ಪಡೆದುಕೊಳ್ಳುತ್ತಿದ್ದಾರೆ. ಬಸ್‌ಗೆ ಬೆಂಕಿ ಹತ್ತಿಕೊಂಡ ನಿಖರ ಕಾರಣ ಪತ್ತೆಹಚ್ಚಲಾಗುತ್ತಿದೆ.



# ತಕ್ಷಣವೇ ರಷ್ಯಾ ತೈಲ ಖರೀದಿ ನಿಲ್ಲಿಸಲ್ಲ; ಭಾರತ ಪುನರುಚ್ಚಾರ

**ದೆಹಲಿ:** ರಷ್ಯಾದ ಮೇಲಿನ ಆರ್ಥಿಕ ನಿರ್ಬಂಧವನ್ನು ಹೆಚ್ಚಿಸುವ ಮೂಲಕ ಆ ದೇಶದ ಮೇಲೆ ಹೆಚ್ಚಿನ ಒತ್ತಡವನ್ನು ತರಲು ರಷ್ಯಾದೊಂದಿಗೆ ಇಂಧನ ವ್ಯವಹಾರ ನಡೆಸುವ ದೇಶಗಳ ಮೇಲೆ ಸುಂಕ ವಿಧಿಸಲು ಮುಂದಾಗಿರುವ ಅಮೆರಿಕಾದಿಂದ ಭಾರತದ ಮೇಲೆ ಪರಿಣಾಮವು ಬೀರಲಿದೆ. ಆದರೆ, ರಷ್ಯಾ ತೈಲ ಖರೀದಿ ಬಗ್ಗೆ ಸ್ಪಷ್ಟ ನಿಲುವನ್ನು ಹೊಂದಿರುವ ಭಾರತ ಮತ್ತೊಮ್ಮೆ ಈ ಕುರಿತು ಸ್ಪಷ್ಟನೆ ನೀಡಿದ್ದು, ತಕ್ಷಣವೇ ರಷ್ಯಾ ತೈಲ ಖರೀದಿ ನಿಲ್ಲಿಸಲ್ಲ ಎಂದು ಪುನರುಚ್ಚರಿಸಿದೆ.



ರಷ್ಯಾ ತೈಲ ಖರೀದಿ ಕುರಿತು ಸೃಷ್ಟಿಯಾಗಿರುವ ಹೊಸ ಚರ್ಚೆಯನಡುವೆ ಈ ಕುರಿತು 'ಬಿಸಿನೆಸ್ ಚೇಂಜ್‌ಮೇಕರ್ ಆವಾರ್ಡ್ಸ್' ಕಾರ್ಯಕ್ರಮದಲ್ಲಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ "ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ಭಾರತವು ತಕ್ಷಣವೇ ನಿಲ್ಲಿಸಲು ಸಾಧ್ಯವಿಲ್ಲ. ಅಷ್ಟೆ ಅಲ್ಲ, ತಕ್ಷಣವೇ ಪೂರೈಕೆದಾರರನ್ನು ಬದಲಾಯಿಸಲು ಕೂಡ ಆಗದು. ಏಕೆಂದರೆ 140 ಕೋಟಿ ಜನರ ಅಗತ್ಯತೆಗಳನ್ನು ಪೂರೈಸಲು ಇದು ಅತ್ಯವಶ್ಯಕ" ಎಂದು ಸ್ಪಷ್ಟಪಡಿಸಿದ್ದಾರೆ.

ಈ ಕುರಿತು ಮಾತನಾಡಿದ ಅವರು, "ಭಾರತವು ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸಿದರೆ ವಿಶ್ವಾದ್ಯಂತ ತೈಲದ ಅಭಾವ ಉಂಟಾಗಲಿದೆ. ಇದು ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಗಳು ತೀವ್ರವಾಗಿ ಏರಲು ಕಾರಣವಾಗಬಹುದು. ಅಮೆರಿಕಾದ ನಿರ್ಬಂಧಗಳು ಮತ್ತು ಹೊಸ ನೀತಿಗಳು ಗಂಭೀರ ಸವಾಲು ಒಡ್ಡುತ್ತವೆಯಾದರೂ, ಭಾರತ ಸರಕಾರವು ಎಲ್ಲಕ್ಕಿಂತ ಹೆಚ್ಚಾಗಿ ತನ್ನ 140 ಕೋಟಿ ನಾಗರಿಕರ ಹಿತಾಸಕ್ತಿಗಳಿಗೆ ಆದ್ಯತೆ ನೀಡುತ್ತದೆ," ಎಂದು ತಿಳಿಸಿದ್ದಾರೆ.

# ಹಾಲು, ಬಸ್ ಪ್ರಯಾಣ ದರ ಏರಿಕೆ ಚರ್ಚೆ

**ಬೆಂಗಳೂರು:** ಹಾಲಿನ ದರ ಹಾಗೂ ಬಸ್ ಪ್ರಯಾಣ ದರದ ಏರಿಕೆ ಬಗ್ಗೆ ವಿಧಾನಪರಿಷತ್ ನಲ್ಲಿ ಚರ್ಚೆ ನಡೆಯಿತು. ಬರ ಪರಿಸ್ಥಿತಿ ಕುರಿತಾಗಿ ನಡೆಯುತ್ತಿದ್ದ ಚರ್ಚೆಯ ಸಂದರ್ಭದಲ್ಲಿ ಹಾಲಿನ ದರ ಏರಿಕೆ ವಿಚಾರವಾಗಿ ಪರಿಷತ್ ಸದಸ್ಯ ಎಸ್ ರವಿ ಪ್ರಸ್ತಾಪಿಸಿ ಮನವಿ ಮಾಡಿದರು. ಲೀಟರ್ ಗೆ 10ರಿಂದ 15ರೂ ಏರಿಕೆ ಮಾಡಿದರೆ ಇದರಿಂದ ರೈತರಿಗೆ ಅನುಕೂಲ ಆಗಲಿದೆ ಎಂದರು.

ಇದೇ ಸಂದರ್ಭದಲ್ಲಿ ನಟ ಡಾ. ರಾಜಕುಮಾರ್ ಮತ್ತು ಅವರ ಮಕ್ಕಳನ್ನು ನಾವು ನೆನಪಿಸಿಕೊಳ್ಳಬೇಕು ಎಂದ ರವಿ, ಅವರೆಲ್ಲರೂ ನಂದಿನಿ ಜೊತೆ ನಿಂತಿಕೊಂಡರು. ಐದು ರೂಪಾಯಿಯೂ ಸಂಭಾವಣೆಯನ್ನು ಪಡೆದುಕೊಳ್ಳದೆ ಪ್ರಚಾರ ಮಾಡಿದ್ರು. ಅವರಿಗೊಂದು ಸದನ ಚಪ್ಪಾಳೆ ಹೊಡಿಬೇಕು. ಮಾಧ್ಯಮದವರು ಅದೇ ರೀತಿ ನಿಂತ್ಕೊಬೇಕು ಎಂದು ಮನವಿ ಮಾಡಿದರು.

ಹೈನುಗಾರಿಕೆಯ ಸಮಸ್ಯೆಯ ಬಗ್ಗೆ ಕಾಂಗ್ರೆಸ್ ಸದಸ್ಯ ಎಸ್ ರವಿ ಪ್ರಸ್ತಾಪ ಮಾಡಿ, ಯಾವ ಯಾವ ರಾಜ್ಯದಲ್ಲಿ ಹಾಲಿನ ಬೆಲೆ ಎಷ್ಟಿದೆ? ನಮ್ಮ ರಾಜ್ಯದಲ್ಲಿ ಹಾಲಿನ ದರ ಎಷ್ಟು ಎಂಬುವುದನ್ನು ಉಲ್ಲೇಖಿಸಿ, ರೈತರಿಗೆ ಆಗ್ತಿರುವ ಹೆಚ್ಚಿನ ವೆಚ್ಚದ ಬಗ್ಗೆ ಸದನದ ಗಮನ ಸೆಳೆದರು.





**ಶರವಣ ಅವರೇ ನಿಮ್ಮ ಬ್ರದರ್ ಗೂ ಹೇಳಿ:** ಇದೇ ಸಂದರ್ಭದಲ್ಲಿ ಜೆಡಿಎಸ್ ಸದಸ್ಯ ಶರವಣ ಅವರನ್ನು ಉದ್ದೇಶಿಸಿ, "ಶರವಣ ಅವ್ರೇ ನಿಮ್ಮ ಬ್ರದರ್ ಗೂ ಹೇಳಿ. ಅವರನ್ನೊಂದು ಕನ್ವಿನ್ಸ್ ಮಾಡಿ. ನಮ್ಮ ಶಿವಕುಮಾರ್ ಸಿಎಂ ಆದಾಗಿನಿಂದ ತಡೆಯೋಕೆ ಆಗ್ತಿಲ್ಲ. ಕೈಯ್ಯನ್ನೆಲ್ಲ ಹಿಸುಕಿಕೊಳ್ತಿದಾರೆ. ಎಲ್ಲಾದರಲ್ಲೂ ವಿರೋಧ ಮಾತಾಡ್ತಿದ್ದಾರೆ. ಈ ವಿಚಾರವಾಗಿ ಅವರನ್ನು ಮ್ಯಾನೇಜ್ ಮಾಡಿ" ಎಂದು ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರನ್ನು ಪರೋಕ್ಷವಾಗಿ ಉಲ್ಲೇಖಿಸಿ ಮನವಿ ಮಾಡಿದರು. ಹಾಲಿನ ದರದ ವಿಚಾರವಾಗಿ ಯಾವುದೇ ರಾಜಕೀಯ ಇಲ್ಲ. ಬಿಗ್ ಬ್ರದರ್‌ಗೂ ಹೋಗಲಿ ಕ್ರೆಡಿಟ್ ಎಂದು ರವಿ ಇದೇ ಸಂದರ್ಭದಲ್ಲಿ ಕಾಲೆಳೆದರು.

## ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಆರೋಪ

# ಕೆಪಿಎಸ್‌ಸಿ ಹಗರಣ ಹೊರ ಬಂದರೆ ಸಚಿವರು ಜೈಲಿಗೆ

**ಬೆಂಗಳೂರು:** ಕೆಪಿಎಸ್‌ಸಿ ಹಗರಣ ಹೊರ ಬಂದ–ರೆ ಅನೇಕ ಸಚಿವರು ಜೈಲಿಗೆ ಹೋಗುತ್ತಾರೆ. ಹಾಗಾಗಿ ಈ ಹಗರಣದ ತನಿಖೆಯನ್ನು ಎಸ್ ಐ ಟಿ ಬದಲಾಗಿ ಸಿಬಿಐಗೆ ನೀಡಿ ಎಂದು ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಆಗ್ರಹಿಸಿದರು. ಪರಿಷತ್ ನಲ್ಲಿ ಈ ವಿಚಾರ ಪ್ರಸ್ತಾಪ ಮಾಡಿದ ಅವರು, ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಕೆಪಿಎಸ್ ಸಿ ಹಗರಣ ಹೊರ ಬಂದರೆ ಹಲವು ಸಚಿವರು ಜೈಲಿಗೆ ಹೋಗುತ್ತಾರೆ. ಹೀಗಾಗಿ ಈ ಬಗ್ಗೆ ಸದನದಲ್ಲಿ ಚರ್ಚೆ ಆಗಬೇಕು. ಪ್ರಕರಣದ ತನಿಖೆಯನ್ನು ಎಸ್ ಐ ಟಿ ಬದಲಾಗಿ ಸಿಬಿಐಗೆ ನೀಡಬೇಕು ಎಂದು ಅವರು ಒತ್ತಾಯಿಸಿದರು.

**ಯಾವ ಕಾನೂನಿನಡಿ ಸಂಸ್ಥೆ ಮುಚ್ಚಲಾಗ್ತಿದೆ?:** ಕೆಪಿಎಸ್ ಸಿ ಸಂಸ್ಥೆಯನ್ನು ಯಾವ ಕಾನೂನಿನ ಅಡಿಯಲ್ಲಿ ಮುಚ್ಚಲು ಅವಕಾಶ ಇದೆ. ಹಾಗಾಗಿ ಈ ಬಗ್ಗೆ ಚರ್ಚೆಗೆ ಅವಕಾಶ ಕೊಡುತ್ತೀರಾ ಇಲ್ಲವೇ ಎಂಬುವುದನ್ನು ತಿಳಿಸಿ ಎಂದು ಸಭಾಪತಿ ಸಲೀಂ ಅಹ್ಮದ್ ಅವರಿಗೆ ಛಲವಾದಿ ಆಗ್ರಹಿಸಿದರು.



ಆದರೆ, ಇದಕ್ಕೆ ಕಾಂಗ್ರೆಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಸಭಾ ನಾಯಕ ಯತೀಂದ್ರ ಸಿದ್ದರಾಮಯ್ಯ ಮಧ್ಯಪ್ರದೇಶ ಮಾಡಿ, ಈ ಪ್ರಕರಣ ನ್ಯಾಯಾಲಯದಲ್ಲಿ ಇದೆ. ಹಾಗಾಗಿ ಸದನದಲ್ಲಿ ಚರ್ಚೆ ಮಾಡಲು ಸಾಧ್ಯವಿಲ್ಲ" ಎಂದರು.

ಬಿಜೆಪಿ ಸದಸ್ಯರ ಬೇಡಿಕೆಯನ್ನು ತಿರಸ್ಕಾರ ಮಾಡಿದ ಸಭಾಪತಿ ಸಲೀಂ: " ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಕೆಪಿಎಸ್ ಸಿ ಬಗ್ಗೆ ಚರ್ಚೆ ಆಗಬೇಕು ಎಂಬ ಪ್ರಸ್ತಾವನೆ ಮಾಡಿಲ್ಲ. ಕೇವಲ ಬರದ ಬಗ್ಗೆ ಚರ್ಚೆ ಆಗಬೇಕು ಹಾಗೂ ಒಂದು ದಿನ ಸದನ ವಿಸ್ತರಣೆ ಮಾಡಬೇಕು ಎಂದು ವಿಪಕ್ಷ ನಾಯಕರು ಮನವಿ ಮಾಡಿದ್ದರು. ಮುಖ್ಯಮಂತ್ರಿ ಅವರು ಬಂದಾಗ ಚರ್ಚೆ ಪ್ರಸ್ತಾಪ ಮಾಡಿ. ಈಗ ಬೇಡ" ಎಂದು ಸೂಚಿಸಿದರು.

ಆದರೆ ಇದಕ್ಕೆ ಒಪ್ಪದ ಛಲವಾದಿ, "ಚರ್ಚೆ ಮಾಡುವ ಬಗ್ಗೆ ನಾವು ಪ್ರಸ್ತಾಪ ಮಾಡಿದ್ದೇವೆ. ಬಿಎಸಿ ಯಲ್ಲಿ ಎಲ್ಲವೂ ತೀರ್ಮಾನ ಆಗಲ್ಲ. ಆದರೆ ಕೆಪಿಎಸ್ ಸಿ ಕೂಡಾ ಮುಖ್ಯವಾದ ವಿಚಾರವಾಗಿದೆ. ಹೀಗಾಗಿ ಚರ್ಚೆಗೆ ಅವಕಾಶ ಕೊಡಬೇಕು. ಪೀಠದಿಂದ ಈ ತೀರ್ಮಾನ ಆಗಲಿ" ಎಂದು ಆಗ್ರಹಿಸಿದರು.

ಇದಕ್ಕೆ ಧ್ವನಿಗೂಡಿಸಿದ ಬಿಜೆಪಿ ಸದಸ್ಯರು, "ಬರದ ಬಗ್ಗೆ ಮಾತನಾಡಿದ ಬಳಿಕ ನಮಗೆ ಅವಕಾಶ ನೀಡಿ" ಎಂದು ಆಗ್ರಹಿಸಿದರು. ಆದರೆ ಇದಕ್ಕೆ ಅವಕಾಶ ನೀಡದೆ ಬರದ ಚರ್ಚೆ ಮುಂದುವರಿಸಲು ಸಭಾಪತಿ ಸೂಚಿಸಿದರು.

# ಸಹಜ ಕೃಷಿಯ ಪವಾಡ: ಬರದಲ್ಲೂ ಉತ್ತಮ ಫಸಲು!



**ರಾಣೇಬೆನ್ನೂರು:** ಬರದ ಛಾಯೆ ಇಡೀ ರಾಜ್ಯವನ್ನೆ ಮುಸುಕಿದೆ. ತೀವ್ರ ಮಳೆ ಅಭಾವದಿಂದ ಕೃಷಿ ಕ್ಷೇತ್ರ ತಲ್ಲಣಿಸಿರುವ ಈ ಹೊತ್ತಿನಲ್ಲಿ ತಾಲೂಕಿನ ಕೂನಬೇವು ಗ್ರಾಮದ ಚಂ ಸು. ಪಾಟೀಲರು ನೈಸರ್ಗಿಕ ಕೃಷಿ ಪದ್ಧತಿಯಲ್ಲಿ ಗೋವಿನ ಜೋಳ ಬೆಳೆಯಲ್ಲಿ ಉತ್ತಮ ಫಸಲು ಬೆಳೆದು ರೈತಾಪಿ ವರ್ಗಕ್ಕೆ ಸ್ಫೂರ್ತಿದಾಯಕ ಎನಿಸಿದ್ದಾರೆ.

ಬಿ. ಎ. ಪದವಿಧರರಾಗಿರುವ ಚಂಸು ಪಾಟೀಲರು ಕೆಲ ವರ್ಷ ನಾಡಿನ ವಿವಿಧ ಪತ್ರಿಕೆಗಳಲ್ಲಿ ಪತ್ರಕರ್ತರಾಗಿ ಸೇವೆ ಸಲ್ಲಿಸಿದ್ದರು. ಜಪಾನಿನ ಕೃಷಿಋಷಿ ಮಸಾನೋಬು ಪುಕುವೋಕಾ ಅವರ ವಿಚಾರ ಮತ್ತು ಬದುಕಿನಿಂದ ಪ್ರೇರಿತರಾದ ಅವರು 2007ರಲ್ಲಿ ತಮ್ಮ ಊರಿಗೆ ಮರಳಿ, ಕೃಷಿಯನ್ನೆ ತಮ್ಮ ಜೀವನ ವಿಧಾನವನ್ನಾಗಿ ಸ್ವೀಕರಿಸಿ, ನೈಸರ್ಗಿಕ ಕೃಷಿಯಲ್ಲಿ ತೊಡಗಿದರು. ಸಿರಿಧಾನ್ಯಗಳು, ತರಕಾರಿ ಬೆಳೆಗಳು, ದೇಸಿ ಗೋವಿನ ಜೋಳ, ಬಿಟಿ ಹತ್ತಿಗೆ ಪರ್ಯಾಯವಾಗಿ ದೇಸಿ ಹತ್ತಿ ಬೆಳೆಯುವ ವಿವಿಧ ಪ್ರಯೋಗಗಳನ್ನು ಕೈಗೊಂಡರು. ಕರ್ನಾಟಕ ಕೃಷಿ ವಿಶ್ವ ವಿದ್ಯಾಲಯದ ಸಾವಯವ ಕೃಷಿ ಕೇಂದ್ರದ ಮುಖ್ಯಸ್ಥರಾಗಿದ್ದ ಡಾ. ಬಬಲಾದ ಅವರ ಮಾರ್ಗದರ್ಶನದಲ್ಲಿ, ದೇಸಿ ಸಹನಾ ಹತ್ತಿ ತಳಿಯನ್ನೂ ಬಿತ್ತಿ (2010/11) ಅದರಲ್ಲಿ ಎಕರೆಗೆ 12 ಕ್ವಿಂಟಾಲ್ ಹತ್ತಿ ಬೆಳೆದು ಯಶ ಕಂಡರು. 'ಸಹಜ ಸಮೃದ್ಧ' ಸಂಸ್ಥೆಯ ಕೃಷ್ಣಪ್ರಸಾದ ಅವರು ಹರಿಯಾಣದಿಂದ ತಂದು ಕೊಟ್ಟಿದ್ದ ಜವಾರಿ ಗೋವಿನ ಜೋಳದ ಒಂದೇ ಒಂದು ತೆನೆಯಿಂದ ಮೂರೆಕರೆಗೆ ಆಗುವಷ್ಟು ಬೀಜ ಮಾಡಿಕೊಂಡು 30 ಕ್ವಿಂಟಾಲ್ ಜವಾರಿ ಗೋವಿನ ಜೋಳ ಬೆಳೆದಿದ್ದು ಕೂಡ ಚಂಸು ಪಾಟೀಲರ ಅಪರೂಪದ ಸಾಧನೆ.(2015/16)

"ನಮಗರಿವಿದ್ದೊ ಇಲ್ಲದೇ ನಾವು ದಿನನಿತ್ಯ ವಿಷಯುಕ್ತ ಆಹಾರ ಸೇವಿಸುತ್ತಿದ್ದೇವೆ. ವಿಷಯುಕ್ತಗಾಳಿಸೇವಿಸುತ್ತಿದ್ದೇವೆ.ವಿಷಯುಕ್ತ ನೀರು ಕುಡಿಯುತ್ತಿದ್ದೇವೆ. ಶುದ್ಧ ಆಹಾರ, ಗಾಳಿ, ನೀರು ಇಂದಿನ ಅಗತ್ಯವಾಗಿದೆ. ಮತ್ತು ಇದು ತಕ್ಷಣಕ್ಕೆ ನಾವು ಹೆಚ್ಚು ಮಹತ್ವ ಕೊಡಬೇಕಾದ ಸಂಗತಿಯಾಗಿದೆ. ನಾವು ಆರೋಗ್ಯವಂತರಾಗಿರಬೇಕೆಂದರೆ, ನಮ್ಮ ಆಯುಷ್ಯ ಹೆಚ್ಚಬೇಕೆಂದರೆ ಅದು ಭೂಮಿಯ ಆರೋಗ್ಯ ಮತ್ತು ಆಯುಷ್ಯವನ್ನೂ ಅವಲಂಬಿಸಿದೆ. ಭೂಮಿಯ ಆರೋಗ್ಯ ಮತ್ತು ಆಯುಷ್ಯವನ್ನು ಹಾಳು ಮಾಡಿ ನಾವು ಮಾತ್ರ ನೆಮ್ಮದಿಯಿಂದ ನೂರು ವರ್ಷ ಬದುಕುತ್ತೇವೆ ಎನ್ನುವುದು ಭ್ರಮೆ!" ಎನ್ನುವ ಚಂಸು ಪಾಟೀಲರು " ಈ ದಿಶೆಯಲ್ಲಿ ನಾವು ಲಾಭಕೋರ ಬಹುರಾಷ್ಟ್ರೀಯ ಕಂಪನಿಗಳ ಕೃಷಿ ವಿಧಾನಗಳನ್ನು ತಿರಸ್ಕರಿಸಿ, ನಮ್ಮ ಪಾರಂಪರಿಕ ಕೃಷಿಗೆ ಮರಳಲೇಬೇಕಾದ ಅಗತ್ಯದ ಬಗ್ಗೆ ವಿವರಿಸುತ್ತಾರೆ.

ಬಹುರಾಷ್ಟ್ರೀಯ ಕಂಪನಿಗಳು ಹುಟ್ಟು ಹಾಕಿರುವ ಆಧುನಿಕ ಕೃಷಿ ವಿಶ್ರಾಂತಿ ರಹಿತ ಜೀವನಶೈಲಿಯನ್ನು ರೂಢಿಸಿದ್ದು ಇದರಿಂದ ಸಮಾಜದಲ್ಲಿ ಮಾನವೀಯ ಮೌಲ್ಯಗಳು ನಶಿಸಿ ಹೋಗಿವೆ. ಏನೆಲ್ಲಾ ಮನೋರಂಜನೆಯ ಪರಿಕರಗಳಿದ್ದಾಗ್ಯೂ, ಸೃಜನಶೀಲತೆಯನ್ನು ಕಳೆದುಕೊಂಡ ಮನುಷ್ಯ ಏಕಾಂಗಿಯಾಗುತ್ತ ಸಾಗುತ್ತಾನೆ, ಇದು ಜೀವನದಲ್ಲಿ ಜಿಗುಪ್ಸೆಯನ್ನುಂಟು ಮಾಡುತ್ತದೆ. ರೈತರ ಆತ್ಮ ಹತ್ಯೆಗಳ ಹಿಂದೆ ಇಂಥ ಹಲವು ಕಾರಣಗಳಿವೆ. ನಮ್ಮ ಪಾರಂಪರಿಕ ಬೆಳೆ ವೈವಿಧ್ಯತೆ ಹಾಗೂ ಆಹಾರ ವೈವಿಧ್ಯತೆಗೆ ಸಂಚಕಾರ ಬಂದಿದೆ. ಸಮಾಜ ಮತ್ತು ಸರ್ಕಾರ ಈ ಬಗ್ಗೆ ಗಂಭೀರವಾಗಿ ಯೋಚಿಸಲೇಬೇಕಾದ ಕಾಲಘಟ್ಟದಲ್ಲಿ ನಾವಿದ್ದೇವೆ ಎಂದು ಚಂಸು ಪಾಟೀಲ ಕೃಷಿ ಕ್ಷೇತ್ರದ ವೈರುಧ್ಯಗಳನ್ನು ಬಿಡಿಸಿಡುತ್ತಾರೆ.

ಕಂಪನಿಗಳ ಕಾರಣಕ್ಕಾಗಿ ಬೆಳೆ ಆಯ್ಕೆಯ ಸ್ವಾತಂತ್ರ್ಯವನ್ನೂ ರೈತರು ಇಂದು ಕಳೆದು ಕೊಂಡಿದ್ದಾರೆ. ವಿಮೆ ಕಂಪನಿಯವರು ಯಾವ ಬೆಳೆಗೆ ವಿಮೆ ಕೊಡುತ್ತಾರೋ ನಾವೂ ಅದನ್ನೇ ಬೆಳೆಯುತ್ತೇವೆ. ಬೇರೆ ಬೆಳೆ ಬೆಳೆದು ಅದಕ್ಕೆ ವಿಮೆ ತುಂಬಿದರೂ ವಿಮೆ ಪರಿಹಾರ ಬರುವುದಿಲ್ಲ. ಪರಿಹಾರ ಕೂಡ ಸಿಗುತ್ತೆ ಅನ್ನೋ ಖಚಿತತೆ ಇಲ್ಲ. ಬಂದರೆ ಏನೋ ತುಸು ಆಸರೆ ಆದೀತೆಂಬ ಭರವಸೆ ನಮ್ಮ ರೈತರದು. ಹಾಗೆಂದೇ ನಾನೂ ಬಾಳೆ ಕುಳೇವಿನ ಹೊಲಕ್ಕೆ ಗೋವಿನಜೋಳ ಹಾಕಿರುತ್ತೇನೆ. ಅದೂ ಸಹಜವಾಗಿಯೇ ಬೆಳೆದು ಚೆನ್ನಾಗಿ ಇಳುವರಿ ಬರುತ್ತದೆ ಎಂದು ಅವರು ವಿವರಿಸುತ್ತಾರೆ.

"ಕಳೆದ ವರ್ಷ ಬಾಳೆ ಹಾಕಿದ್ದ ಕುಳೆ ಹೊಲವನ್ನು ಬೇಸಿಗೆಯಲ್ಲೆ ಮಾಗೀ ಉಳುಮೆ ಮಾಡಿಕೊಂಡಿದ್ದವು. ಈ ವರ್ಷ ಮೃಗಶೀರ ಮಳೆಗೆ ಬೀಜ ಬಿತ್ತಿದ್ದೆವು. ಒಮ್ಮೆ ಮಾತ್ರ ಎಡೆ ಹೊಡೆದೆವು. ಮತ್ತೆ ಏನೂ ಇಲ್ಲ, ಗೋವಿನ ಜೋಳ ಸಮೃದ್ಧವಾಗಿ ಬೆಳೆದು ಬಂತು. ಸಾವಯವ ಕೃಷಿಯಿಂದ ಜಮೀನಿನ ಮಣ್ಣು ತನ್ನಷ್ಟಕ್ಕೆ ತಾನೇ ಫಲವತ್ತಾಗುತ್ತದೆ. ರಸಾಯನಿಕ ಕೃಷಿಯ ಪರಿಣಾಮ ಮಣ್ಣಿನಲ್ಲಿ ಸಾವಯವ ಇಂಗಾಲದ ಪ್ರಮಾಣ ಕಡಿಮೆ ಆಗಿ ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಶಕ್ತಿಯನ್ನೆ ಕಳೆದುಕೊಳ್ಳುತ್ತದೆ, ಸುತ್ತ ಮುತ್ತಲಿನ ರೈತರು ಕಡ್ಡಾಯವಾಗಿ ರಸಗೊಬ್ಬರ ನೀಡಿ, ಕೀಟ, ಕಳೆ ನಾಶಕ ಸಿಂಪರಿಸಿಸುತಿದ್ದರೂ, ಅದರ ಮಧ್ಯೆಯೇ, ಯಾವುದೇ ರೋಗ ರುಜಿನ, ಕೀಟ ಬಾಧೆ ಇಲ್ಲದೇ ಗೋವಿನ ಜೋಳ ಬೆಳೆದಿದ್ದು ನನಗೆ ಸಂತಸ ತಂದಿದೆ. ರಸಾಯನಿಕ ಕೃಷಿಯೇ ಎಲ್ಲ ರೋಗ ರೋಗರುಜಿನಗಳ ತಾಯಿ ಎಂಬುದು ಇದರಿಂದ ಮನದಟ್ಟಾಗಿದೆ." ಎಂದು ಅವರು ಗೋವಿನ ಜೋಳ ಬೆಳೆಯ ಸಮೃದ್ಧ ಫಸಲಿಗೆ ಏನು ಕಾರಣ ಎಂಬುದನ್ನು ಪಟ್ಟಿ ಮಾಡುತ್ತಾರೆ.

ನಮ್ಮ ಆರೋಗ್ಯವೂ ಸೇರಿದಂತೆ, ಪ್ರಕೃತಿ ವಿಕೋಪಗಳಾದ ಅತಿವೃಷ್ಟಿ ಅನಾವೃಷ್ಟಿಗಳ ಮಧ್ಯೆಯೂಸುಸ್ಥಿರಕೃಷಿಗೆನೈಸರ್ಗಿಕಅಥವಾನಮ್ಮ ಪಾರಂಪರಿಕ ಕೃಷಿಯೆ ಉತ್ತಮ ಮಾರ್ಗವಾಗಿದ್ದು ಸರ್ಕಾರ ಈ ಬಗ್ಗೆ ಚಿಂತಿಸಿ ರೈತರನ್ನು ಉತ್ತೇಜಿಸಬೇಕು ಎಂದು ಚಂಸು ಪಾಟೀಲರು ಅಭಿಪ್ರಾಯ ಪಡುತ್ತಾರೆ.

### 7 ಎಕರೆ ಮಸಾರಿ ಜಮೀನು

**ಗೆಜ್ಜೆ ಶೇಂಗಾ/ ಒಂದುವರೆ ಎಕರೆ,**
**ಬಳ್ಳಿಶೇಂಗಾ/ ಎರಡೂವರೆ ಎಕರೆ,**
**ಪುಟ್ಟ ಬಾಳೆ/ ಒಂದೆಕರೆ.**
**ಗೋವಿನಜೋಳ/ ಎರಡೆಕರೆ**
**100 ತೆಂಗು**
**50 ತೇಗ**
**50 ಮಹಾಗಣಿ**
**6 ಪೇರಲ, ನುಗ್ಗೆ, ಕರಿಬೇವು, ಪಪ್ಪಾಳೆ ಗಿಡಗಳಿವೆ.**
**ಒಂದು ಜವಾರಿ ಆಕಳು ಮತ್ತು ಕರು**
**ಒಂದು ಎಮ್ಮೆ ಮತ್ತು ಕರು**
**ಒಂದು ಜೆರ್ಸಿ ಆಕಳು ಇವೆ.**





# ವ್ಯಕ್ತಿತ್ವ ನಿರ್ಮಾಣದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಪಾತ್ರ ಬಹಳ ಮುಖ್ಯವಾದುದು

**ಸಮಾಲೋಚನೆ ಸುದ್ದಿ ರಾಣೆಬೆನ್ನೂರು**

ವಿದ್ಯಾರ್ಥಿಗಳ ವ್ಯಕ್ತಿತ್ವ ನಿರ್ಮಾಣದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಪಾತ್ರ ಬಹಳ ಮುಖ್ಯವಾದದ್ದು, ಸೇವಾ ಮನೋಭಾವವನ್ನು ರೂಢಿಸಿಕೊಂಡು ಆದರ್ಶಮಯ ಬದುಕನ್ನು ಕಟ್ಟಿಕೊಳ್ಳಲು ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಗಳು ಬಹಳ ಅವಶ್ಯಕವಾಗಿದೆ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಇದು ಸಹಕಾರಿಯಾಗಲಿದೆ ಎಂದು ಸಾಹಿತಿ ಡಾ. ಕಾಂತೇಶರೆಡ್ಡಿ ಗೋಡಿಹಾಳ ಅವರು ತಿಳಿಸಿದರು.

ನಗರದ ಆರ್ ಟಿ ಇ ಎಸ್ ಕಲಾ ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆ ಸಂಸ್ಥಾಪನೆಯ ದಿನಾಚರಣೆಯ ಕಾರ್ಯಕ್ರಮದಲ್ಲಿ ಇವರು ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆಯು ಮಹಾತ್ಮ ಗಾಂಧಿಜಿಯವರ ರಾಷ್ಟ್ರ ನಿರ್ಮಾಣದ ಕನಸುಗಳನ್ನು ನನಸಾಗಿಸಲು1969 ಸಪ್ಟಂಬರ್ 24ರಂದು ಆಗಿನ ಕೇಂದ್ರದ ವಿದ್ಯಾ ಮಂತ್ರಿಗಳಾದ ಡಾ. ವಿ ಕೆ ಆರ್ ರಾವ್ ಅವರಿಂದ ರಾಷ್ಟ್ರೀಯ ಸೇವಾ ಯೋಜನೆ ಉದ್ಘಾಟನೆಯಾಯಿತು. 1986 ರಲ್ಲಿ ರೂಪಿಸಿದ ರಾಷ್ಟ್ರೀಯ ನವ ಶಿಕ್ಷಣ ನೀತಿಯು ರಾಷ್ಟ್ರೀಯ ಸೇವಾ ಯೋಜನೆಗೆ ಬಹಳಷ್ಟು ಮಹತ್ವ ನೀಡಿತು. ಕಾಲೇಜಿನಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳು ಎನ್ಎಸ್ಎಸ್ ಸ್ಕೌಟ್ಸ್ ಗೈಡ್ಸ್ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡು ಅವರ ಸರ್ವತೋಮುಖ ಅಭಿವೃದ್ಧಿ ಜೊತೆಗೆ ದೇಶದ ಅಭಿವೃದ್ಧಿಗೆ ಪೂರಕವಾಗಿದೆ ಎಂದು ಈ ಯೋಜನೆಯನ್ನು ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ವಿಶ್ವವಿದ್ಯಾಲಯಗಳ ಮೂಲಕ ಕಾಲೇಜುಗಳಲ್ಲಿ ಅನುಷ್ಠಾನಗೊಳಿಸಿದರು. ಪ್ರಾರಂಭದಲ್ಲಿ 37 ವಿಶ್ವವಿದ್ಯಾಲಯಗಳಲ್ಲಿ 40,000 ವಿದ್ಯಾರ್ಥಿಗಳಿಂದ ಪ್ರಾರಂಭವಾದ ಈ ಯೋಜನೆ ಇಂದು ಭಾರತದಾದ್ಯಂತ 750 ವಿಶ್ವವಿದ್ಯಾಲಯಗಳಲ್ಲಿ 40 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಯೋಜನೆಯಲ್ಲಿ ತೊಡಗಿದ್ದಾರೆ. ಕರ್ನಾಟಕ ಒಂದರಲ್ಲಿ ಸುಮಾರು 3ಲಕ್ಷ 21,000 ವಿದ್ಯಾರ್ಥಿಗಳು ಎನ್ಎಸ್ಎಸ್ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಹೀಗಾಗಿ ಸೇವಾ ಮನೋಭಾವದಿಂದ ಬರುವಂತಹ ವಿದ್ಯಾರ್ಥಿಗಳಿಗೆ ರಾಷ್ಟ್ರದ ಆದರ್ಶಗಳನ್ನು ರೂಪಿಸಲು ಈ ಯೋಜನೆಯು ಮಹತ್ತರವಾದ ಕಾರ್ಯವನ್ನು ಮಾಡುತ್ತಿದೆ ಎಂದು ನುಡಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕಾಲೇಜಿನ ಅಧ್ಯಕ್ಷರಾದ ಡಾಟಟ ಸಂಜಯ್ ಸಾಹುಕಾರ್ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳು ಸೇವಾ ಮನೋಭಾವ, ಶಿಸ್ತು, ಸಂಯಮ ಇವುಗಳಿಂದ ಅವರ ವೃತ್ತಿ ಗೌರವ ಸಹಬಾಳ್ವೆ, ಬ್ರಾತೃತ್ವ, ಜಾತ್ಯತೀತತೆ ಈ ಎಲ್ಲಾ ಆದರ್ಶಗಳು ಅವರ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಸಹಕಾರಿಯಾಗಿದೆ. ಆದ್ದ-ರಿಂದ ವಿದ್ಯಾರ್ಥಿಗಳು ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಮೂಲಕ ಕಾಲೇಜಿಗೆ ಕೀರ್ತಿ ತರಬೇಕೆಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಚಾರ್ಯರಾದ ಡಾ. ರಾಮರಡ್ಡಿ ಎಸ್ ರಡ್ಡೇರ ಅವರು ರಾಷ್ಟ್ರೀಯ ಸೇವಾ ಯೋಜನೆಯ ಉದ್ದೇಶ ನನಗಲ್ಲ ನಿಮಗೆ ಎನ್ನುವುದಾಗಿದೆ. ಉತ್ತಮ ಆದರ್ಶ ಗುಣಗಳನ್ನು ರೂಢಿಸಿಕೊಳ್ಳಲು ಸರಳ ಜೀವನ ಉದಾತ್ತ ಚಿಂತನೆ ಮೈಗೂಡಿಸಿಕೊಳ್ಳಲು, ಸಹಕಾರ ತತ್ವಗಳನ್ನು ಅಳವಡಿಸಿಕೊಳ್ಳಲು, ಎನ್ಎಸ್ಎಸ್ ನೆರವಿಗೆ ಬರುತ್ತದೆ ಸಮಾಜದಲ್ಲಿನ ದೀನ ದಲಿತ ನೊಂದ ಮಹಿಳೆಯರು ಅಂಗವಿಕಲರು ಇವರೆಲ್ಲರ ಬಗ್ಗೆ ಅನುಕಂಪ ಹೊಂದಿ ಪ್ರಾಮಾಣಿಕ ಸೇವೆಯನ್ನ ಮಾಡಲು ಎನ್ಎಸ್ಎಸ್ ಅಭ್ಯರ್ಥಿಗಳು ಪಣ ತೊಡಬೇಕು ಎಂದು ತಿಳಿಸಿದರು. ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀಮತಿ , ಇ ಕೋಟೆ ಮಾತನಾಡಿ ವಿದ್ಯಾರ್ಥಿಗಳಿಗೆ ಇಂದು ರಾಷ್ಟ್ರೀಯ ಸೇವಾ ಯೋಜನೆ ಅಮೂಲ್ಯವಾದ ಕೊಡುಗೆ ಆಗಿದೆ ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ನುಡಿದರು.

ಡಾ.ಮಾಲತೇಶ ಪೂಜಾರ ಪ್ರಸ್ತಾವಿಕ ನುಡಿಗಳನ್ನಾಡಿದರು ಐ ಕ್ಯೂ ಎ ಸಿ ಸಂಚಾಲಕರಾದ ಪ್ರವೀಣ ಎನ್ ಎ,ಉಪನ್ಯಾಸಕರಾದ ರಾಜೇಶ್, ಶಿವಕುಮಾರ್ ಬೆಣ್ಣಿ, ಸಿ ಎನ್ ಪೂಜಾರ್, ಚಂದ್ರಗೌಡ, ಉಪಸ್ಥಿತರಿದ್ದರು ಸುಧಾ ದೇವರಗುಡ್ಡ ಕಾರ್ಯಕ್ರಮ ನಿರೂಪಿಸಿದರು.




# ಜಿಲ್ಲಾ ಮಟ್ಟದ ಕ್ರೀಡಾಕೂಟಕ್ಕೆ ವಿದ್ಯಾರ್ಥಿಗಳ ಆಯ್ಕೆ

**ಗಜೇಂದ್ರಗಡ:** ತಾಲೂಕಿನ ಗೋಗೇರಿ ಗ್ರಾಮದ ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿಗಳು ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿ ಸಾಧನೆ ಮಾಡಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಶಾಲೆಯ ಪುಟ್ಟರಾಜ್ ಅಡವಿ 200 ಮೀ ಓಟದಲ್ಲಿ ಪ್ರಥಮ, ಮಹದೇವಪ್ಪ ಗುಂಡೆ 800 ಮೀ. ಓಟದಲ್ಲಿ ಪ್ರಥಮ, ಶಶಿಧರ್ ಜೂಲಗುಡ್ಡ 1500 ಮೀಟರ್ ಓಟದಲ್ಲಿ ದ್ವಿತೀಯ, ಜ್ಯೋತಿ ಬೂದಿಹಾಳ 800 ಮೀ.ಓಟದಲ್ಲಿ ಪ್ರಥಮ, ಬಾಲಕರು 4*100 ರೀಲೆ ಪ್ರಥಮ, ಬಾಲಕಿಯರು 4ಘಿ100 ರೀಲೆ ಪ್ರಥಮ ಹಾಗೂ ಬಾಲಕ, ಬಾಲಕಿಯರು ಖೋ ಖೋದಲ್ಲಿ ಪ್ರಥಮ ಸ್ಥಾನ ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆ ಆಗಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಎಸ್ ಡಿಎಂಸಿ ಅಧ್ಯಕ್ಷರು, ಸದಸ್ಯರು ಹಾಗೂ ಶಿಕ್ಷಕರು ಹರ್ಷ ವ್ಯಕ್ತಪಡಿಸಿದ್ದಾರೆ.




# ಕಿಯೋನಿಕ್ಸ್ ಯುವ.ಕಾಂ ಗೆ ಕರ್ನಾಟಕದಲ್ಲೇ ನಂ.1 ಸ್ಥಾನ

## 37 ವರ್ಷಗಳ ಸೇವೆಗೆ ಸರ್ಕಾರದ ಗೌರವ । 38 ಸಾವಿರಕ್ಕೂ ಹೆಚ್ಚು ಯುವಕರಿಗೆ ಕಂಪ್ಯೂಟರ್ ಶಿಕ್ಷಣ

**ಸಮಾಲೋಚನೆ ಸುದ್ದಿ ರಾಣೇಬೆನ್ನೂರು**

ನಗರದ ಕಿಯೋನಿಕ್ಸ್ ಯುವ.ಕಾಂ ಕಂಪ್ಯೂಟರ್ ಸಂಸ್ಥೆ ಕರ್ನಾಟಕದ 130 ಕಿಯೋನಿಕ್ಸ್ ಕೇಂದ್ರಗಳ ಪೈಕಿ ನಂ.1 ಸ್ಥಾನ ಪಡೆದು ರಾಜ್ಯಮಟ್ಟದ ಗೌರವಕ್ಕೆ ಪಾತ್ರವಾಗಿದೆ.

ಯುವ ಪೀಳಿಗೆಯನ್ನು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಸಜ್ಜುಗೊಳಿಸುವ ಉದ್ದೇಶದಿಂದ ಸಂಸ್ಥೆಯು 1989ರಿಂದ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಕಳೆದ 37 ವರ್ಷಗಳಲ್ಲಿ 15ರಿಂದ 20ಕ್ಕೂ ಹೆಚ್ಚು ವಿವಿಧ ಕಂಪ್ಯೂಟರ್ ಕೋರ್ಸ್‌ಗಳ ಮೂಲಕ ಸುಮಾರು 38 ಸಾವಿರಕ್ಕೂ ಅಧಿಕ ಯುವಕ-ಯುವತಿಯರಿಗೆ ಕಂಪ್ಯೂಟರ್ ತಂತ್ರಜ್ಞಾನ ಶಿಕ್ಷಣ ನೀಡಿದ್ದು, ಸಾವಿರಾರು ವಿದ್ಯಾರ್ಥಿಗಳಿಗೆ ಉದ್ಯೋಗ ಹಾಗೂ ವೃತ್ತಿ ರೂಪಿಸಿಕೊಳ್ಳಲು ಮಾರ್ಗದರ್ಶನ ನೀಡಿದೆ ಎಂದು ಸಂಸ್ಥೆಯ ಮುಖ್ಯಸ್ಥ ಡಾ. ಸುರೇಶ ಸಿ.ಟಿ. ಹೇಳಿದರು.

ಬೆಂಗಳೂರಿನ ತಾಜ್ ವೆಸ್ಟ್ ಎಂಡ್‌ನಲ್ಲಿ ಸೆ.22ರಂದು ನಡೆದ ಕಿಯೋನಿಕ್ಸ್ ಸಂಸ್ಥೆಯ 50ನೇ ವರ್ಷದ ಸಂಭ್ರಮಾಚರಣೆ ಕಾರ್ಯಕ್ರಮದಲ್ಲಿ ರಾಣೇಬೆನ್ನೂರಿನ ಕಿಯೋನಿಕ್ಸ್ ಯುವ.ಕಾಂಗೆ ಈ ಗೌರವ ನೀಡಲಾಯಿತು. ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್,ಮಾಜಿಮುಖ್ಯಮಂತ್ರಿವೀರಪ್ಪ ಮೊಯ್ಲಿ, ಐಟಿ-ಬಿಟಿ, ಗೃಹ ವ್ಯವಹಾರಗಳು ಹಾಗೂ ಇ-ಆಡಳಿತ ಸಚಿವ ಪ್ರಿಯಾಂಕ್ ಮಲ್ಲಿಕಾರ್ಜುನ ಖರ್ಗೆ, ಕಿಯೋನಿಕ್ಸ್ ಅಧ್ಯಕ್ಷ ಹಾಗೂ ಶಾಸಕ ಶರತ್ ಬಚ್ಚೇಗೌಡ ಮತ್ತು ಕಿಯೋನಿಕ್ಸ್ ವ್ಯವಸ್ಥಾಪಕ ನಿರ್ದೇಶಕ ಡಾ. ಅವಿನಾಶ್ ಮೆನನ್ ರಾಜೇಂದ್ರನ್ ಐಎಎಸ್ ಸೇರಿದಂತೆಗಣ್ಯರುಪ್ರಶಸ್ತಿಪ್ರದಾನಮಾಡಿದರು ಎಂದು ಅಕಾಡೆಮಿಕ್ ಹೆಡ್ ಲಲಿತಾ ಸುರೇಶ ತಿಳಿಸಿದರು. ನಿರಂತರ ಪರಿಶ್ರಮ ಹಾಗೂ ಕಾಲಮಾನಕ್ಕೆ ತಕ್ಕಂತೆ ನೂತನ ತಂತ್ರಜ್ಞಾನ ಮತ್ತು ತರಬೇತಿ ವಿಧಾನಗಳನ್ನು ಅಳವಡಿಸಿಕೊಂಡಿರುವುದನ್ನು ರಾಜ್ಯ ಸರ್ಕಾರ ಗುರುತಿಸಿ ನಂ.1 ಸ್ಥಾನ ನೀಡಿ ಗೌರವಿಸಿರುವುದು ಮತ್ತಷ್ಟು ಉತ್ತಮ ಸೇವೆ ಸಲ್ಲಿಸಲು ಪ್ರೇರಣೆಯಾಗಿದೆ ಎಂದು ಲ್ಯಾಬ್ ಹೆಡ್ ನಾಗರಾಜ ಕಟ್ಟೀಮನಿ ಹೇಳಿದರು.

ಕರ್ನಾಟಕದಲ್ಲಿ ಎಂಜಿನಿಯರಿಂಗ್ ಪದವಿ ಪಡೆದು ಫ್ರಾನ್ಸ್‌ನ ಪ್ಯಾರಿಸ್‌ನಲ್ಲಿ ಎಂ.ಎಸ್. ಉನ್ನತ ಶಿಕ್ಷಣ ಪಡೆದಿರುವ ಸಂಸ್ಥೆಯ ಮ್ಯಾನೇಜಿಂಗ್ ಡೈರೆಕ್ಟರ್ ಆಕಾಶ್ ಮಾತನಾಡಿ, ತಂದೆ-ತಾಯಿ ಹಾಗೂ ಕುಟುಂಬದ ಆಶಯದಂತೆ ಕಿಯೋನಿಕ್ಸ್ ಮತ್ತು ರೇನ್‌ಬೋ ಪಿಯು ಕಾಲೇಜಿನ ಜವಾಬ್ದಾರಿ ವಹಿಸಿಕೊಂಡಿದ್ದು, ಈ ಪ್ರಶಸ್ತಿ ಯುವಜನತೆಗೆ ಇನ್ನಷ್ಟು ಉತ್ಸಾಹ ನೀಡಿದೆ ಎಂದರು. ಸಂಸ್ಥೆಯ ಸೆಂಟರ್ ಮ್ಯಾನೇಜರ್ ವಿಶಾಲ್ ಹಾಗೂ ಎಲ್ಲ ಸಿಬ್ಬಂದಿಯ ಸತತ ಪರಿಶ್ರಮವೇ ಈ ಸಾಧನೆಗೆ ಕಾರಣ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಕುಟುಂಬದ ಹಿರಿಯರಾದ ಪ್ರೊ. ಎಸ್.ಎನ್. ಕಟ್ಟೀಮನಿ, ವೀರಣ್ಣ, ಶಾರದ, ಶಿವಣ್ಣ ಸಿ.ಟಿ., ರಾಜು ಎನ್.ಟಿ., ಮಾಲತೇಶ್ ಐ.ಕೆ. ಹಾಗೂ ಗೀತಾ ಉಪಸ್ಥಿತರಿದ್ದರು.




# ಕೊಲೆ ಆರೋಪಿಗಳ ಬಂಧನ

## ಪ್ರೀತಿಸಿ ಮದುವೆಯಾಗಿದ್ದೆ ದ್ವೇಷ ಬೆಳೆಯಲು ಕಾರಣ । ಎಸ್ಪಿ ಯಶೋಧಾ ವಂಟಗೋಡಿ ಮಾಹಿತಿ

**ಸಮಾಲೋಚನೆ ಸುದ್ದಿ ಹಾವೇರಿ**

ರಾಣೆಬೆನ್ನೂರು ತಾಲೂಕಿನ ಕೋಡಿಯಾಲ ಹೊಸಪೇಟೆ ಗ್ರಾಮದ ಪುನೀತಕುಮಾರ ಶಿಗ್ಗಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಇಬ್ಬರು ಆರೋಪಿಗಳನ್ನು ಬಂಧಿಸುವಲ್ಲಿ ಕುಮಾರಪಟ್ಟಣ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ ಎಂದು ಎಸ್ಪಿ ಯಶೋಧಾ ವಂಟಗೋಡಿ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರೋಪಿಗಳಾದ ಕೋಡಿಯಾಲ ಹೊಸಪೇಟೆಯ ಅಭಿಷೇಕರೆಡ್ಡಿ ನಂದಿಗಾವಿ (26) ಹಾಗೂ ಅಭಿಷೇಕ ಚಂದ್ರಪ್ಪ ಗೋಣೆಪ್ಪನವರ (21) ಎಂಬುವರನ್ನು ಬಂಧಿಸಲಾಗಿದೆ. ಹೆಚ್ಚಿನ ತನಿಖೆ ಕೈಗೊಳ್ಳಲಾಗಿದೆ ಎಂದರು.

ಪೊಲೀಸ್ ತನಿಖೆಯ ಪ್ರಕಾರ, ಪುನೀತಕುಮಾರ 2024ರಲ್ಲಿ ಅಕ್ಷತಾ ಎಂಬ ಯುವತಿಯನ್ನು ಪ್ರೀತಿಸಿ ವಿವಾಹವಾಗಿದ್ದರು. ನಂತರ ದಂಪತಿ ನಡುವೆ ಭಿನ್ನಾಭಿಪ್ರಾಯ ಉಂಟಾಗಿ ವಿಚ್ಛೇದನಕ್ಕೆ ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಇದೇ ವಿಚಾರಕ್ಕೆ ಸಂಬಂಸಿದಂತೆ ಪುನೀತಕುಮಾರನೊಂದಿಗೆ ಆರೋಪಿಗಳು ದ್ವೇಷ ಹೊಂದಿದ್ದರೆಂಬುದು ಗೊತ್ತಾಗಿದೆ.

ಸೆ. 7ರಂದು ಕೋಡಿಯಾಲ ಹೊಸಪೇಟೆಯಲ್ಲಿ ವಾಲಿಬಾಲ್ ಆಟವಾಡುತ್ತಿದ್ದ ವೇಳೆ ಅಕ್ಷತಾ ವಿಚಾರವಾಗಿ ಅಭಿಷೇಕ ಗೋಣೆಪ್ಪನವರ ಹಾಗೂ ಅಭಿಷೇಕರೆಡ್ಡಿ ನಂದಿಗಾವಿ ಪುನೀತಕುಮಾರನೊಂದಿಗೆ ಜಗಳವಾಡಿ ಹಲ್ಲೆ ನಡೆಸಿದ್ದರು. ಅದೇ ರಾತ್ರಿ ಅಯ್ಯಪ್ಪಸ್ವಾಮಿ ದೇವಸ್ಥಾನದ ಬಳಿ ಪುನೀತಕುಮಾರನನ್ನು ಕರೆಸಿಕೊಂಡು ಹಲ್ಲೆ ನಡೆಸಿ, ಹತ್ಯೆಗೈದಿದ್ದಾರೆ. ಬಳಿಕ ಮೃತದೇಹವನ್ನು ತುಂಗಭದ್ರಾ ನದಿಗೆ ಎಸೆದಿದ್ದರು ಎಂದು ವಿವರಿಸಿದರು.

ಪ್ರಕರಣದ ತನಿಖೆಗಾಗಿ ಕುಮಾರಪಟ್ಟಣಂ ಸಿಪಿಐ ಸಿದ್ದೇಶ ಎಂ.ಡಿ., ಪಿಎಸ್ಐ ನಿಂಗರಾಜ ಕರಕಣ್ಣನವರ ಹಾಗೂ ಸಿಬ್ಬಂದಿ ಒಳಗೊಂಡ ವಿಶೇಷ ತಂಡ ರಚಿಸಲಾಗಿತ್ತು. ತಂಡವು ತನಿಖೆ ನಡೆಸಿ ಗುರುವಾರ ಬೆಳಗ್ಗೆ ಇಬ್ಬರು ಪ್ರಮುಖ ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ತಿಳಿಸಿದರು.



SAMALOCHANE RANEBENNURSUDDI
Kannada Daily Morning

ಸಮಾಲೋಚನೆ ಸುದ್ದಿ

ಶುಕ್ರವಾರ 25 ಸೆಪ್ಟೆಂಬರ್ 2026
25 SEPTEMBER 2026



# ಬ್ಯಾಡಗಿಯಲ್ಲಿ ಮಟ್ಕಾ-ಇಸ್ಪೀಟ್ ದಂಧೆಗಿಲ್ಲ ಬ್ರೇಕ್

## ರಾಜಾರೋಷವಾಗಿ ನಡೆಯುತ್ತಿವೆ ಅಕ್ರಮ ಚಟುವಟಿಕೆಗಳು । ಕಡಿವಾಣ ಹಾಕಬೇಕಿದೆ ಅಧಿಕಾರಿಗಳು

ಗಣೇಶ ಎಸ್.ಎ. ಬ್ಯಾಡಗಿ

ತಾಲೂಕಿನಲ್ಲಿ ಮಟ್ಕಾ, ಇಸ್ಪೆಟ್, ಸೇರಿದಂತೆ ಕಾನೂನು ಬಾಹಿರ ಚಟುವಟಿಕೆಗಳು ಎಗ್ಗಿಲ್ಲದೇ ಸಾಗಿದ್ದು, ಅಂತರಾಷ್ಟ್ರೀಯ ಖ್ಯಾತಿಯ ಮೆಣಸಿನಕಾಯಿ ನಗರಕ್ಕೆ ಕಳಂಕ ತರುತ್ತಿವೆ, ಇದಕ್ಕೆ ಕಡಿವಾಣ ಹಾಕಬೇಕಿದ್ದ ಪೊಲೀಸ್ ಇಲಾಖೆಯ ನಿರ್ಲಕ್ಷ್ಯದ ವಿರುದ್ಧ ಸಾರ್ವಜನಿಕರಿಂದ ಅಪಸ್ವರಗಳು ಕೇಳಿ ಬರುತ್ತಿವೆ.

ಬ್ಯಾಡಗಿ ತಾಲೂಕು ಹಾಗೂ ಜಿಲ್ಲೆಯಲ್ಲಿ ಅಕ್ರಮ ಹಾಗೂ ಕಾನೂನು ಬಾಹಿರ ಚಟುವಟಿಕೆಗಳು ರಹಸ್ಯವಾಗಿ ಉಳಿದಿಲ್ಲ, ಬದಲಾಗಿ ರಾಜಾರೋಷವಾಗಿ ನಡೆಯುತ್ತಿದ್ದು, ಅಕ್ರಮ ಚಟುವಟಿಕೆಗಳ ಬಹುದೊಡ್ಡ ಮಾಫಿಯಾ ತನ್ನ ಕದಂಬ ಬಾಹುಗಳನ್ನ ಚಾಚಿ ತನ್ನ ಬೆಳೆ ಬೇಯಿಸಿಕೊಳ್ಳುತ್ತಿರುವುದು ಗುಟ್ಟಾಗಿ ಉಳಿದಿಲ್ಲ.

> **ಪಟ್ಟಣದಲ್ಲಿ ಮಟ್ಕಾ ಇಸ್ಪೀಟ್ ಆಡುವವರ ವಿರುದ್ದ ಈಗಾಗಲೇ ಕೆಲವು ಪ್ರಕರಣ ದಾಖಲಿಸಲಾಗಿದೆ, ಮತ್ತೆ ಕಂಡು ಬಂದಲ್ಲಿ ಕೇಸ್ ದಾಖಲು ಮಾಡಲಿದ್ದೇವೆ.**
> । ಎಂ.ಬಿ.ಚಿಕ್ಕಣ್ಣನವರ ಸಿಪಿಐ

ಯುವಕರು ಕಾರ್ಮಿಕರ ಬದುಕು ಬೀದಿಗೆ:ದುಡಿದು ಸಂಪಾದಿಸಿದ ಹಣವನ್ನು ಕ್ಷಣಾರ್ಧದಲ್ಲಿ ದುಪ್ಪಟ್ಟು ಮಾಡಿಕೊಳ್ಳುವ ಆಸೆ ಹುಟ್ಟಿ ಸುವ ಇಂತಹ ಜೂಜಾಟದ ದಂಧೆಗಳು ಯುವಕರು ಹಾಗೂ ಕೂಲಿ ಕಾರ್ಮಿಕರು ಸೇರಿದಂತೆ ಆರ್ಥಿಕವಾಗಿ ದುರ್ಬಲ ವರ್ಗದ ಕುಟುಂಬಗಳ ಮೇಲೆ ದುಷ್ಪರಿಣಾಮ ಬೀರುವ ಸಾಧ್ಯತೆ ಇದೆ. ಜೂಜಾಟದ ಚಟುವಟಿಕೆಗಳಿಂದಾಗಿ ಕುಟುಂಬಗಳಲ್ಲಿ ಆರ್ಥಿಕ ಸಂಕಷ್ಟ, ಸಾಲಬಾಧೆ ಹಾಗೂ ಸಾಮಾಜಿಕ ಸಮಸ್ಯೆಗಳು ಉಂಟಾಗುವ ಆತಂಕವೂ ಸಾರ್ವಜನಿಕರಲ್ಲಿ ವ್ಯಕ್ತವಾಗಿದೆ.

ಅಂತರಾಷ್ಟ್ರೀಯ ಖ್ಯಾತಿಗೆ ಕಳಂಕ:ಬ್ಯಾಡಗಿ ಎಂದರೆ ದೇಶ-ವಿದೇಶಗಳಲ್ಲಿ ಮೆಣಸಿನಕಾಯಿ ವ್ಯಾಪಾರದ ಪ್ರಮುಖ ಕೇಂದ್ರವೆಂಬ ಹೆಗ್ಗಳಿಕೆ ಹೊಂದಿರುವ ತಾಲೂಕು. ಪ್ರತಿದಿನ ವಿವಿಧ ಜಿಲ್ಲೆ ಹಾಗೂ ರಾಜ್ಯಗಳಿಂದ ವ್ಯಾಪಾರಿಗಳು, ರೈತರು ಮತ್ತು ವರ್ತಕರು ಪಟ್ಟಣಕ್ಕೆ ಆಗಮಿಸುತ್ತಾರೆ. ಇಂತಹ ಸಂದರ್ಭದಲ್ಲಿ ಅಕ್ರಮ ಚಟುವಟಿಕೆಗಳಿಗೆ



ಅವಕಾಶ ಸಿಗದಂತೆ ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕಣ್ಗಾವಲು ವ್ಯವಸ್ಥೆ ರೂಪಿಸಬೇಕಾಗಿದೆ. ಮಟ್ಕಾ, ಇಸ್ಪೀಟ್ ಸೇರಿದಂತೆ ಕಾನೂನುಬಾಹಿರ ಜೂಜಾಟದ ಚಟುವಟಿಕೆಗಳ ಕುರಿತು ಸಾರ್ವಜನಿಕರಿಂದ ಯಾವುದೇ ದೂರುಗಳು ಬಂದಿದ್ದರೆ ಅವುಗಳನ್ನು ಗಂಭೀರವಾಗಿ ಪರಿಗಣಿಸಿ, ಸ್ಥಳೀಯವಾಗಿ ಮಾತ್ರವಲ್ಲದೆ ತಾಲೂಕಿನಾದ್ಯಂತ ವಿಶೇಷ ನಿಗಾ ವಹಿಸಬೇಕೆಂಬ ಆಗ್ರಹ ಕೇಳಿಬರುತ್ತಿದೆ.

ಮಟ್ಕಾ ದಂಧೆಗಿಲ್ಲ ಕಡಿವಾಣ:ಪಟ್ಟಣದ ಪ್ರಮುಖ ವೃತ್ತಗಳು ಸೇರಿದಂತೆ ಗೂಡಂಗಡಿಗಳಲ್ಲಿ ಹಾಗೂ ಗ್ರಾಮೀಣ ಭಾಗದಲ್ಲಿ 1 ರೂಗೆ 80 ರೂಪಾಯಿ ನೀಡುವ ಮಟ್ಕಾ ದಂಧೆ ಯಾವುದೇ ಅಡೆ ತಡೆಯಿಲ್ಲದೇ ನಡೆದಿದೆ. ಪಟ್ಟಣ ಸೇರಿದಂತೆ ಗ್ರಾಮೀಣ ಭಾಗದಲ್ಲಿನ ಕೆಲವರನ್ನ ಬಳಸಿಕೊಂಡು ಎಲ್ಲೋ ಕುಳಿತು ಮಟ್ಕಾ ಧಂದೆ ನಡೆಸುವ ಕುಳಗಳು ಬಡವರ ರಕ್ತ ಹೀರುವ ಮೂಲಕ ಅವರ ಬದು ಕನ್ನ ಬೀದಿಗೆ ತಂದು ನಿಲ್ಲಿಸಿವೆ. ಎಲ್ಲ ಅಕ್ರಮ ಚಟುವಟಿಗಳು ತಮ್ಮ ವ್ಯಾಪ್ತಿಯಲ್ಲಿ ಕಣ್ಣ ಮುಂದೇ ನಡೆಯುತ್ತಿದ್ದರೂ ಸಹ ಪೊಲೀಸ್ ಇಲಾಖೆ ಮಾತ್ರ ಕಣ್ಣು ಮುಚ್ಚಿ ಕುಳಿತಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ.

> **ಕೇವಲ ಬ್ಯಾಡಗಿ ತಾಲೂಕಷ್ಟೆ ಅಲ್ಲದೇ ಜಿಲ್ಲೆಯಲ್ಲಿ ಮಟ್ಕಾ ಇಸ್ಪೀಟ್ ಮಾಫಿಯಾ ಎಗ್ಗಿಲ್ಲದೆ ಸಾಗಿದೆ, ಇಂತವುಗಳಿಂದ ಬ್ಯಾಡಗಿ ಖ್ಯಾತಿಗೆ ಚ್ಯುತಿ ಬರುತ್ತಿದೆ. ಬೇಕಾದಾಗ ಚಾಲು ಮಾಡಿ ಸುವುದು ಬೇಡವಾದಾಗ ಬಂದ್ ಮಾಡಿಸುವುದರ ಹಿಂದೆ ಜಿಲ್ಲೆಯ ಕೆಲ ಪ್ರಭಾವಿಗಳ ಕೈವಾಡವಿರುವುದು ಗುಟ್ಟಾಗಿ ಉಳಿದಿಲ್ಲ. ಸಾರ್ವಜನಿಕರಿಗೆ ದೊರೆಯುವ ಅಕ್ರಮ ಚಟುವಟಿಕೆಗಳ ಮಾಹಿತಿ ಹಾವೇರಿ ಎಸ್‌ಪಿ ಸಾಹೇಬರಿಗೆ ಸಿಗುತ್ತಿಲ್ಲ ಎಂಬುದು ವಿರ್ಪಾಸದ ಸಂಗತಿ.**
> । ನಿಂಗಪ್ಪ ಬಟ್ಟಲಕಟ್ಟಿ ಬಿಜೆಪಿ ತಾಲೂಕಾಧ್ಯಕ್ಷ

ಇಸ್ಪೀಟ್ ಮಾಫಿಯಾ:ತಾಲೂಕಿನಲ್ಲಿ ಇಸ್ಪೀಟ್ (ಜೂಜಾಟ) ಕೂಡ ಆಳವಾಗಿ ಬೇರುಬಿಟ್ಟಿದೆ. ಪಟ್ಟಣದ ಅರ ಣ್ಯ ಪ್ರದೇಶಗಳಲ್ಲಿ ಕೋಟ್ಯಂತರ ರೂಪಾಯಿಗಳ ಮಟ್ಟದಲ್ಲಿ ಈ ಆಟ ನಡೆಯುತ್ತಿದ್ದು, ಹಲವರು ತಮ್ಮ ಮನೆ-ಮಠ ಮಾರಿಕೊಂಡು ಜೀವನವನ್ನು ಹಾಳು ಮಾಡಿಕೊಂಡಿದ್ದಾರೆ. ಇಂತಹ ಅಡ್ಡೆಗಳ ನಿರ್ವಹಣೆಗೆ ಪ್ರತ್ಯೇಕ ತಂಡವಿದ್ದು, ಅತ್ಯಂತ ಭದ್ರತೆಯೊಂದಿಗೆ ಕಾರ್ಯ ನಿರ್ವಹಿಸುತ್ತಿದೆ. ತಾಲೂಕಿನ ವಿವಿಧ ಅರಣ್ಯ ಪ್ರದೇಶಗಳಲ್ಲಿ ನಡೆಯುವ ಇಸ್ಪೀಟ್ ಅಡ್ಡಾಗಳ ಮೇಲೆ ಅರಣ್ಯ ಪ್ರದೇಶದ ಸುತ್ತಮುತ್ತ ಡ್ರೋನ್ ಕ್ಯಾಮೆರಾ ಬಳಸಿ ನಿಗಾವಹಿಸುವ ಮಟ್ಟಿಗೆ ವ್ಯವಸ್ಥೆ ಮಾಡಲಾಗಿದೆ ಎಂಬುದು ಈ ಜಾಲದ ಸಂಘಟಿತ ಶಕ್ತಿ ತೋರಿಸುತ್ತದೆ. ಗ್ರಾಮೀಣ ಭಾಗಗಳಲ್ಲಿಯೂ ಇಸ್ಪೀಟ್ ಚಟುವಟಿಕೆಗಳು ಮುಂದುವರೆದಿರುವದು ಕಳವಳಕಾರಿ ವಿಷಯವಾಗಿದೆ.

ಗೋಲಿ ಆಟ ಹೊಸ ಸೇರ್ಪಡೆ:ಇಸ್ಪೀಟ್ (ಜೂಜಾಟ) ಮಟ್ಕಾ ಜೊತೆಗೆ ಈದೀಗ ಖದೀಮರು ತಮ್ಮ ವ್ಯಾಪ್ತಿಗೆ ಗೋಲಿ ಆಟವನ್ನ ಸೇರಿಸಿಕೊಂಡಿದ್ದು ಅದರಲ್ಲಿಯೂ ಜೂಜಾಟ ನಡೆಸುವ ಮೂಲಕ ಜನರ ಬದುಕನ್ನ ದಿವಾಳಿಯಾಗಿಸಿದ್ದಾರೆ. ಕಾಗಿನೆಲೆ. ಚಿಕ್ಕಬಾ ಸೂರ, ಕದರಮಂಡಲಗಿ, ಪಟ್ಟಣದ ಕೆಲ ಇಟ್ಟಂಗಿ ಭಟ್ಟಿಗಳಲ್ಲಿ ಇಸ್ಪೀಟ್ ಆಟದ ಮಜಲು ಜೋರಾಗಿದೆ.

---

## ವಿಕಲಚೇತನರ ವಿಶ್ರಾಂತಿ ಗೃಹ ನಿರ್ವಹಣೆಗೆ ಅರ್ಜಿ

**ಹಾವೇರಿ:** ಬ್ಯಾಡಗಿ ಪಟ್ಟಣದ ತಹಶೀಲ್ದಾರ್ ಕಚೇರಿ ಆವರಣದಲ್ಲಿ ಪುರಸಭೆಯಿಂದ ನಿರ್ಮಿಸಿರುವ ವಿಕಲಚೇತನರ ವಿಶ್ರಾಂತಿ ಗೃಹದ ನಿರ್ವಹಣೆಗಾಗಿ ನೋಂದಾಯಿತ ವಿಕಲಚೇತನರ ಕ್ಷೇಮಾಭಿವೃದ್ಧಿ ಸಂಘ-ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವಿಕಲಚೇತನರ ಕ್ಷೇಮಾಭಿವೃದ್ಧಿ ಸಂಘ-ಸಂಸ್ಥೆಗಳು ವಿಶ್ರಾಂತಿ ಗೃಹದ ನಿರ್ವಹಣೆ ವಹಿಸಿಕೊಳ್ಳಲು ಆಸಕ್ತಿ ಹೊಂದಿದ್ದಲ್ಲಿ, ಸೂಕ್ತ ದಾಖಲೆಗಳೊಂದಿಗೆ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 7 ದಿನಗಳೊಳಗಾಗಿ ಬ್ಯಾಡಗಿ ಪುರಸಭೆಗೆ ಅರ್ಜಿ ಸಲ್ಲಿಸಬೇಕು.

ಈ ಕುರಿತು ಸಾರ್ವಜನಿಕರಿಂದ ಸಲಹೆ, ಸೂಚನೆ ಹಾಗೂ ಆಕ್ಷೇಪಣೆಗಳಿದ್ದಲ್ಲಿ ನಿಗದಿತ ಅವಧಿಯೊಳಗೆ ಪುರಸಭೆಗೆ ಸಲ್ಲಿಸಬೇಕು ನಿಗದಿತ ಅವಧಿ ನಂತರ ಸಲ್ಲಿಸುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಬ್ಯಾಡಗಿ ಪುರಸಭೆ ಮುಖ್ಯಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## 14 ಯೋಜನೆಗಳ ಸೌಲಭ್ಯಕ್ಕೆ ಅರ್ಜಿ ಆಹ್ವಾನ

**ಹಾವೇರಿ:** ವಿಕಲಚೇತನರು ಹಾಗೂ ಹಿರಿಯ ನಾಗರಿಕ ಸಬಲೀಕರಣ ಇಲಾಖೆಯ 2026-27ನೇ ಸಾಲಿನ ವಿವಿಧ ಫಲಾನುಭವಿ ಆಧಾರಿತ ಯೋಜನೆಗಳ ಸೌಲಭ್ಯ ಪಡೆಯಲು ಅರ್ಹರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ವಿಕಲಚೇತನರು ಹಾಗೂ ಹಿರಿಯ ನಾಗರಿಕರಿಗೆ ಸಂಬಂಧಿಸಿದಂತೆ ಒಟ್ಟು 14 ಯೋಜನೆಗಳಾದ ಆಧಾರ ಯೋಜನೆ, ಸಾಧನ ಯೋಜನೆ, ವೈದ್ಯಕೀಯ ಪರಿಹಾರ ನಿಧಿ ಯೋಜನೆ, ಅಂಗವಿಕಲ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ, ನಿರುದ್ಯೋಗ ಭತ್ಯೆ,ಶುಶ್ರೂಷಾ ಭತ್ಯೆ, ಮರಣ ಪರಿಹಾರ ನಿಧಿ, ಪ್ರತಿಷ್ಠಾ ಯೋಜನೆ, ಅಂಧ ವಿದ್ಯಾರ್ಥಿಗಳಿಗೆ ಟಾಕಿಂಗ್ ಲ್ಯಾಪ್‌ಟಾಪ್, ದೃಷ್ಟಿದೋಷ ಹೊಂದಿರುವ ವಿಕಲಚೇತನರಿಗೆ ಬ್ರೈಲ್ ಕಿಟ್, ದೈಹಿಕ ವಿಕಲಚೇತನರಿಗೆ ಯಂತ್ರಚಾಲಿತ ದ್ವಿಚಕ್ರ ವಾಹನ, ಶ್ರವಣದೋಷವುಳ್ಳವರಿಗೆ ಸ್ವಯಂ ಉದ್ಯೋಗಕ್ಕಾಗಿ ಹೊಲಿಗೆ ಯಂತ್ರ, ಸಾಧನ ಸಲಕರಣೆ ಹಾಗೂ ಬ್ಯಾಟರಿ ಚಾಲಿತ ವ್ಹೀಲ್‌ಚೇರ್ ಮುಂತಾದ ಯೋಜನೆಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಅರ್ಹರು ಀಣಣಠಿ://ಜತಚಿಠಟಿಜ.ಞಚಿಡಿಟಿಚಿಣಚಿಞಚಿ.ರಠಡಿ.ಟಿ/ ವೆಬ್‌ಸೈಟ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಸೆ.22 ರಿಂದ ಅ.30 ರ ವರೆಗೆ ಅವಕಾಶವಿದ್ದು, ಆನ್‌ಲೈನ್‌ನಲ್ಲಿ ಭರ್ತಿ ಮಾಡಿದ ಅರ್ಜಿಯ ಹಾರ್ಡ್ ಪ್ರತಿಯನ್ನು ಸಂಬಂಧಿಸಿದ ತಾಲ್ಲೂಕಿನ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಆಯಾ ತಾಲ್ಲೂಕಿನ ವಿವಿದೋದ್ದೇಶ ಪುನರ್ವಸತಿ ಕಾರ್ಯಕರ್ತರನ್ನು ಸಂಪರ್ಕಿಸುವಂತೆ ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಸಿದ್ದಾರೆ.

## ನಗದು ಜಪ್ತಿ ಪ್ರಕರಣಗಳ ಪರಿಶೀಲನೆಗೆ ಸಮಿತಿ ರಚನೆ

**ಹಾವೇರಿ:** ಕರ್ನಾಟಕ ಪಶ್ಚಿಮ ಪದವೀಧರ ಚುನಾವಣೆ-2026 ರ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ನಗದು ಜಪ್ತಿ ಪ್ರಕರಣಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ಕೈಗೊಳ್ಳಲು ನಗದು ಜಪ್ತಿ ಪರಿಹಾರ ಸಮಿತಿ (Cash Seizure Redressal Committee) ರಚಿಸಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ಡಾ. ವಿಜಯಮಹಂತೇಶ ದಾನಮ್ಮನವರ ಆದೇಶ ಹೊರಡಿಸಿದ್ದಾರೆ. ಚುನಾವಣಾಧಿಕಾರಿಗಳ ನಿರ್ದೇಶನದಂತೆ ಜಿಲ್ಲೆಯಲ್ಲಿ ರಚಿಸಲಾಗಿರುವ ಸಮಿತಿಯು ಪೊಲೀಸ್, ಎಸ್‌ಎಸ್‌ಟಿ (ಸ್ಥಿರ ಕಣ್ಗಾವಲು ತಂಡ) ಹಾಗೂ ಎಫ್‌ಎಸ್ (ಫ್ಲೈಯಿಂಗ್ ಸ್ಕ್ವಾಡ್) ತಂಡಗಳಿಂದ ಜಪ್ತಿ ಮಾಡಲಾಗುವ ನಗದು ಪ್ರಕರಣಗಳನ್ನು ಸ್ವಯಂಪ್ರೇರಿತವಾಗಿ ಪರಿಶೀಲಿಸಿ, ನಿಯಮಾನುಸಾರ ಅಗತ್ಯ ನಿರ್ಧಾರ ಕೈಗೊಳ್ಳಲಿದೆ. ನಗದು ಜಪ್ತಿ ಹಾಗೂ ಬಿಡುಗಡೆಗೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ದಿನಾಂಕವಾರು ನೋಂದಣಿ ಪುಸ್ತಕದಲ್ಲಿ ನಿರ್ವಹಿಸಲಿದೆ.

ಸಮಿತಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ದಲ್‌ಜೀತ್ ಕುಮಾರ್, ಐಎಎಸ್ ಅವರು ಅಧ್ಯಕ್ಷರಾಗಿದ್ದು, ಹಾವೇರಿ ಸ್ಥಳೀಯ ಲೆಕ್ಕಪರಿಶೋಧನಾ ವೃತ್ತದ ಹಿರಿಯ ಲೆಕ್ಕಪರಿಶೋಧಕ ಡಾ. ದಿನೇಶ್ ಕೆ. ಹಾಗೂ ಹಾವೇರಿ ಜಿಲ್ಲಾ ಖಜಾನೆ ಅಧಿಕಾರಿ ಜಿ.ಟಿ. ಸುರೇಶ್ ಅವರು ಸದಸ್ಯರಾಗಿದ್ದಾರೆ. ಚುನಾವಣೆ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಸಮಿತಿಯು ಕಾರ್ಯನಿರ್ವಹಿಸಲಿದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಸಿದ್ದಾರೆ.

## ಜಿಲ್ಲಾ ಸಾಮಾಜಿಕ ಜಾಲತಾಣ ಕೋಶ ರಚನೆ

**ಹಾವೇರಿ:** ಕರ್ನಾಟಕ ಪಶ್ಚಿಮ ಪದವೀಧರ ಚುನಾವಣೆ-2026 ರ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಸಾಮಾಜಿಕ ಜಾಲತಾಣಗಳ ಮೇಲ್ವಿಚಾರಣೆ ಹಾಗೂ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಗಳನ್ನು ಗಮನಿಸಲು ಜಿಲ್ಲಾ ಸಾಮಾಜಿಕ ಜಾಲತಾಣ ಕೋಶವನ್ನು ರಚಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳಾದ ಡಾ. ವಿಜಯ ಮಹಾಂತೇಶ್ ದಾನಮ್ಮನವರ ಆದೇಶ ಹೊರಡಿಸಿದ್ದಾರೆ.

ಜಿಲ್ಲಾ ಚುನಾವಣಾಧಿಕಾರಿ ಹಾಗೂ ಚುನಾವಣಾ ಆಯೋಗದ ನಿರ್ದೇಶನದಂತೆ ರಚಿಸಲಾಗಿರುವ ಈ ಕೋಶವು ಫೇಸ್‌ಬುಕ್, ವಾಟ್ಸ್ ಆಪ್, ಇನ್‌ಸ್ಟಾಗ್ರಾಂ, ಎಕ್ಸ್ ಸೇರಿದಂತೆ ವಿವಿಧ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟವಾಗುವ ಮಾಹಿತಿಗಳನ್ನು ಗಮನಿಸಲಿದೆ. ಚುನಾವಣಾ ನೀತಿ ಸಂಹಿತೆಗೆ ವಿರುದ್ಧವಾಗಿರುವ ಯಾವುದೇ ಪೋಸ್ಟ್‌ಗಳು ಕಂಡುಬಂದಲ್ಲಿ ಅವುಗಳನ್ನು ಜಿಲ್ಲಾ ಚುನಾವಣಾಧಿಕಾರಿಗಳ ಗಮನಕ್ಕೆ ತರಲಿದೆ. ಅಲ್ಲದೆ ಮತದಾರರಿಗೆ ಚುನಾವಣಾ ಪ್ರಕ್ರಿಯೆಯ ಕುರಿತು ಅಗತ್ಯ ಅರಿವು ಮೂಡಿಸುವ ಕಾರ್ಯದಲ್ಲಿಯೂ ಸಹಕರಿಸಲಿದೆ. ಜಿಲ್ಲಾ ಸಾಮಾಜಿಕ ಜಾಲತಾಣ ಕೋಶದಲ್ಲಿ ಎನ್‌ಐಸಿ ಜಿಲ್ಲಾ ಮಾಹಿತಿ ಅಧಿಕಾರಿ ಅಭಿಷೇಕ್ ಕುಮಾರ್, ಜಿಲ್ಲಾ ಮಾಹಿತಿ ಅಧಿಕಾರಿ ಹಾಗೂ ಸಹಾಯಕ ನಿರ್ದೇಶಕಿ ಭಾರತಿ ಎಚ್. ಮತ್ತು ಸವಣೂರು ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಅರವಿಂದ ಐರಣಿ ಅವರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ. ಜಿಲ್ಲಾ ಮಾಹಿತಿ ಅಧಿಕಾರಿ/ಸಹಾಯಕ ನಿರ್ದೇಶಕರು ಕೋಶದ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲಿದ್ದು, ಸಮಿತಿಯ ಸಭೆಗಳನ್ನು ತಕ್ಷಣ ಆಯೋಜಿಸುವ ಜವಾಬ್ದಾರಿಯನ್ನು ವಹಿಸಲಿದ್ದಾರೆ. ಚುನಾವಣಾ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಈ ಕೋಶವು ಕಾರ್ಯನಿರ್ವಹಿಸಲಿದೆ ಎಂದು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಸಿದ್ದಾರೆ.

---

## ಅರ್ಹ ಪ್ರತಿಯೊಬ್ಬ ನಾಗರಿಕನೂ ಮತದಾರರ ಪಟ್ಟಿಗೆ ಸೇರ್ಪಡೆಯಾಗಲಿ: ವಿಪುಲ್ ಬನ್ಸಲ್

**ಗದಗ:** "ಅರ್ಹ ಪ್ರತಿಯೊಬ್ಬ ನಾಗರಿಕನೂ ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗುವುದು ಪ್ರಜಾಪ್ರಭುತ್ವದ ಮೂಲ ಆಶಯವಾಗಿದೆ. ಹೀಗಾಗಿ, ಜಿಲ್ಲೆಯಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯವನ್ನು ಅತ್ಯಂತ ನಿಖರವಾಗಿ ಮತ್ತು ಪಾರದರ್ಶಕವಾಗಿ ಕಾರ್ಯ ನಿರ್ವಹಿಸಬೇಕು" ಎಂದು ವಾಣಿಜ್ಯ ತೆರಿಗೆಗಳ ಇಲಾಖೆ ಆಯುಕ್ತರು ಹಾಗೂ ಗದಗ ಜಿಲ್ಲಾ ಮತದಾರರ ಪಟ್ಟಿಯ ವೀಕ್ಷಕರಾದ ವಿಪುಲ್ ಬನ್ಸಲ್ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ಸೆಪ್ಟೆಂಬರ್ (23) ರವರ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026 ಸಭೆ ಹಾಗೂ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಜೊತೆ ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಅರ್ಹ ಮತದಾರರ ನೋಂದಣಿ 18 ವರ್ಷ ತುಂಬಿದ ಯುವಕ- ಯುವತಿಯರು ಹಾಗೂ ಇಲ್ಲಿಯವರೆಗೆ ಮತದಾರರ ಪಟ್ಟಿಗೆ ಸೇರ್ಪಡೆಯಾಗದ ಅರ್ಹ ನಾಗರಿಕರ ಹೆಸರುಗಳನ್ನು ಆದ್ಯತೆಯ ಮೇರೆಗೆ ಸೇರ್ಪಡೆಗೊಳಿಸಲು ಕ್ರಮವಹಿಸಬೇಕು ಎಂದು ಹೇಳಿದರು.

ದೋಷರಹಿತ ಮತದಾರರ ಪಟ್ಟಿಯಲ್ಲಿ ಮತದಾರರ ಪಟ್ಟಿಯಲ್ಲಿರುವವರ ಹೆಸರು, ವಿಳಾಸ, ಭಾವಚಿತ್ರ ಮುಂತಾದ ತಿದ್ದುಪಡಿಗಳನ್ನು (ನಮೂನೆ 8) ರಲ್ಲಿ ತ್ವರಿತವಾಗಿ ಪರಿಶೀಲಿಸಿ ಸರಿಪಡಿಸುವುದು ಹಾಗೂ ಮೃತಪಟ್ಟ ಮತ್ತು ಸ್ಥಳಾಂತರಗೊಂಡ ಮತದಾರರ ಹೆಸರುಗಳನ್ನು (ನಮೂನೆ 7) ನಿಯಮಾನುಸಾರ ತೆಗೆದುಹಾಕುವುದು. ಬಿ.ಎಲ್.ಓ.ಗಳ ಕರ್ತವ್ಯ ಜವಾಬ್ದಾರಿ ಬೂತ್ ಮಟ್ಟದ ಅಧಿಕಾರಿಗಳು (ಃಐಔ) ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಯಾವುದೇ ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ಜಾಗ್ರತೆ ವಹಿಸಬೇಕು ಎಂದರು.

ಜಿಲ್ಲಾಧಿಕಾರಿ ಸಿ. ಎನ್. ಶ್ರೀಧರ ಮಾತನಾಡಿ ಗದಗ ಜಿಲ್ಲೆಯಲ್ಲಿ ಒಟ್ಟು 122 ಗ್ರಾಮ ಪಂಚಾಯಿತಿಗಳಿದ್ದು ವಿಧಾನ ಸಭಾ ಮತ ಕ್ಷೇತ್ರವನ್ನು ನಾಲ್ಕು ವಿಭಾಗಗಳಾಗಿ ಶಿರಹಟ್ಟಿ 65' ಗದಗ 66' ರೋಣ 67' ನರಗುಂದ 68



ವಿಂಗಡಿಸಲಾಗಿದೆ. ಒಟ್ಟು 353 ಗ್ರಾಮಗಳು ಮತ್ತು 203 ವಾರ್ಡ್ ಗಳಿವೆ. ಜಿಲ್ಲೆಯಲ್ಲಿ ರಾಜಕೀಯ ಪಕ್ಷಗಳಾದ ಐ.ಎನ್.ಸಿ. 967, ಬಿಜೆಪಿ 967, ಜೆಡಿಎಸ್ 62, ಸಿಪಿಐಎಮ್ 30 ಬಿಎಲ್‌ಒಗಳನ್ನು ಮಾಡಿವೆ.

ಜಿಲ್ಲಾದ್ಯಂತ ಚುನಾವಣಾ ಮತಗಟ್ಟೆಗಳು 983 ಇವೆ, ಬಿಎಲ್‌ಒ ಗಳು 983 ಜನ ಮತ್ತು ಬಿಎಲ್‌ಎ ಸೂಪರ್ವೈಸರ್ಸ್ 97 ಜನ ನೇಮಿಸಿ ಕಾರ್ಯ ನಿರ್ವಹಿಸಲಾಗುತ್ತಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮುಕುಲ್ ಜೈನ್ ಮಾತನಾಡಿ ಜಿಲ್ಲೆಯಲ್ಲಿ ಇದುವರೆಗೂ ಒಟ್ಟು 9,02,947 ಮತದಾರರು ಇದ್ದು 7,82,232 ಡಿಜಿಟಲಿಕರಣಗೊಂಡಿದ್ದು ಪ್ರತಿಶತ 86.63 ಎನುಮರೇಷನ ಫಾರ್ಮ್ ಡಿಜಿಟಲಿಕರಣಗೊಂಡಿವೆ ಎಂದು ಹೇಳಿದರು.

ಅಪರ ಜಿಲ್ಲಾಧಿಕಾರಿ ಡಾ. ದುರಗೇಶ್ ಕೆ. ಆರ್ ಮಾತನಾಡಿ ಗದಗ ಜಿಲ್ಲೆಯಲ್ಲಿ ಯುವ ಮತದಾರರು ಪಟ್ಟಿಯಲ್ಲಿ ಪುರುಷರು 2232 ಮತ್ತು ಮಹಿಳೆಯರು 1903 ಒಟ್ಟು 4135 ಯುವ ಮತದಾರರು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ವಿಶೇಷ ಅಭಿಯಾನದಲ್ಲಿ ಪಾಲ್ಗೊಂಡು ನೊಂದಾಯಿಸಿದ್ದಾರೆ. ಮತದಾರ ಪಟ್ಟಿ ವಿಶೇಷ ಅಭಿಯಾನದಲ್ಲಿ ಒಟ್ಟು 8166 ಹೊಸಬರು ಅರ್ಜಿ ಸಲ್ಲಿಸಿದ್ದಾರೆ ಎಂದು ಹೇಳಿದರು.

ಸಭೆಯಲ್ಲಿ ಎಸಿ ಗಂಗಪ್ಪ ಎಂ, ಜಿಪಂ ಮುಖ್ಯ ಯೋಜನಾಧಿಕಾರಿ ಎ.ಎ. ಕಂಬಾಳಿಮಠ, ತಹಶೀಲ್ದಾರ ಶ್ರೀನಿವಾಸ ಮೂರ್ತಿ, ಆಹಾರ ಇಲಾಖೆಯ ಉಪನಿರ್ದೇಶಕ ಎಮ್ ಎಸ್ ಪಾಟೀಲ್, ಚುನಾವಣಾ ಶಾಖೆಯ ತಹಶಿಲ್ದಾರ ಸಂತೋಷ ಹಿರೇಮಠ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಸನಗೌಡ ಕೊಟೂರು, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕಿ ಡಾ.ನಂದಾ ಹಣಬರಹಟ್ಟಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧಿಕಾರಿ ಎಂ ಎಂ ತುಂಬರಮಟ್ಟಿ, ವಾರ್ತಾಧಿಕಾರಿ ವಸಂತ ಮಡ್ಲೂರ ಸೇರಿದಂತೆ ಇತರ ಅಧಿಕಾರಿಗಳು, ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಹಾಜರಿದ್ದರು.

---

## ಕನಿಷ್ಠ ಎರಡು ತಿಂಗಳ ಔಷಧಿ ವಿತರಿಸಲು ಕ್ರಮ ಕೈಗೊಳ್ಳಬೇಕು

**ದಾವಣಗೆರೆ:** ಚಿಗಟೇರಿ ಜಿಲ್ಲಾ ಆಸ್ಪತ್ರೆಗೆ ಮಾನಸಿಕ ಆರೋಗ್ಯ ಸಮಸ್ಯೆಗಳ ಚಿಕಿತ್ಸೆಗಾಗಿ ದೂರದ ಗ್ರಾಮಗಳಿಂದ ಆಗಮಿಸುವ ರೋಗಿಗಳಿಗೆ ಪ್ರಸ್ತುತ 15 ದಿನಗಳಿಗಷ್ಟೇ ಔಷಧಿ ನೀಡಲಾಗುತ್ತಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ, ರೋಗಿಯ ಆರೋಗ್ಯ ಸ್ಥಿತಿಗೆ ಅನುಗುಣವಾಗಿ ವೈದ್ಯಕೀಯ ನಿಯಮಗಳ ವ್ಯಾಪ್ತಿಯಲ್ಲಿ ಕನಿಷ್ಠ ಎರಡು ತಿಂಗಳ ಔಷಧಿ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ಎಸ್‌ಡಿಪಿಐ ರಾಜ್ಯ ಪ್ರಧಾನ ಕಾರ್ಯದರ್ಶಿ ಅಪ್ಸರ್ ಕೊಡ್ಲಿಪೇಟೆ ಆಗ್ರಹಿಸಿದ್ದಾರೆ.

ಈ ಕುರಿತು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಿಗೆ ಮನವಿ ಸಲ್ಲಿಸಿರುವ ಅವರು, ಪ್ರತಿ 15 ದಿನಗಳಿಗೊಮ್ಮೆ ದೂರದ ಊರುಗಳಿಂದ ದಾವಣಗೆರೆಗೆ ಬಂದು ವೈದ್ಯರನ್ನು ಭೇಟಿಯಾಗಿ ಔಷಧಿ ಪಡೆಯಬೇಕಾಗಿರುವುದರಿಂದ ರೋಗಿಗಳು ಹಾಗೂ ಕುಟುಂಬದವರಿಗೆ ಆರ್ಥಿಕ ಮತ್ತು ದೈಹಿಕ ತೊಂದರೆಯಾಗುತ್ತಿದೆ ಎಂದು ತಿಳಿಸಿದ್ದಾರೆ.

ವಿಶೇಷವಾಗಿ ಬಡವರು, ವಯೋವೃದ್ಧರು ಹಾಗೂ ರೋಗಿಗಳ ಆರೈಕೆದಾರರಿಗೆ ಪದೇಪದೇ ಆಸ್ಪತ್ರೆಗೆ ಭೇಟಿ ನೀಡುವುದು ಹೆಚ್ಚುವರಿ ಹೊರೆಯಾಗುತ್ತಿದೆ. ವೈದ್ಯಕೀಯ ಅಗತ್ಯಕ್ಕೆ ಅನುಗುಣವಾಗಿ ಸಾಧ್ಯವಿರುವ ಸಂದರ್ಭಗಳಲ್ಲಿ ಎರಡು ತಿಂಗಳ ಔಷಧಿಯನ್ನು ಒಮ್ಮೆಲೇ ವಿತರಿಸುವ ವ್ಯವಸ್ಥೆ ಕಲ್ಪಿಸಿದರೆ ನಿರಂತರ ಔಷಧಿ ಸೇವನೆಗೂ ಅನುಕೂಲವಾಗಲಿದೆ ಎಂದು ಹೇಳಿದ್ದಾರೆ.



ವಿಕಲಚೇತನರಿಗೆ ಔಷಧಿ ಲಭ್ಯವಾಗಲಿ ವಿಕಲಚೇತನರಿಗೆ ಅಗತ್ಯವಿರುವ ಮಲ್ಟಿ-ವಿಟಮಿನ್ ಸಿರಪ್ ಸೇರಿದಂತೆ ಕೆಲವು ಔಷಧಿಗಳನ್ನು ಆಸ್ಪತ್ರೆಯಲ್ಲಿ ನೀಡದೆ ಹೊರಗಿನ ಮೆಡಿಕಲ್‌ಗಳಿಂದ ಖರೀದಿಸುವಂತೆ ಸೂಚಿಸಲಾಗುತ್ತಿದೆ ಎಂಬ ದೂರುಗಳ ಬಗ್ಗೆಯೂ ಜಿಲ್ಲಾ ಆರೋಗ್ಯ ಇಲಾಖೆ ಪರಿಶೀಲನೆ ನಡೆಸಬೇಕು ಎಂದು ಅಪ್ಸರ್ ಕೊಡ್ಲಿಪೇಟೆ ಒತ್ತಾಯಿಸಿದ್ದಾರೆ. ಸರ್ಕಾರಿ ಆಸ್ಪತ್ರೆಯಲ್ಲಿ ನಿಯಮಾನುಸಾರ ಉಚಿತವಾಗಿ ಲಭ್ಯವಾಗಬೇಕಾದ ಔಷಧಿಗಳು ಅರ್ಹರಿಗೆ ಸಿಗುತ್ತಿವೆಯೇ ಎಂಬುದನ್ನು ಪರಿಶೀಲಿಸಿ, ಕೊರತೆ ಅಥವಾ ಪೂರೈಕೆ ಸಮಸ್ಯೆ ಇದ್ದರೆ ತಕ್ಷಣ ಪರಿಹರಿಸಬೇಕು. ಅಗತ್ಯ ಔಷಧಿಗಳು ನಿರಂತರವಾಗಿ ಲಭ್ಯವಾಗುವಂತೆ ಕ್ರಮ ಕೈಗೊಂಡು, ಕೈಗೊಂಡ ಕ್ರಮಗಳ ಕುರಿತು ಸಾರ್ವಜನಿಕರಿಗೆ ಸ್ಪಷ್ಟ ಮಾಹಿತಿ ನೀಡಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಮಾನಸಿಕ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರು ಹಾಗೂ ವಿಕಲಚೇತನರಿಗೆ ಚಿಕಿತ್ಸೆ ಪಡೆಯುವುದೇ ಮತ್ತೊಂದು ಸಂಕಷ್ಟವಾಗದಂತೆ ಮಾನವೀಯ ಹಾಗೂ ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಈ ಸಮಸ್ಯೆಯನ್ನು ತುರ್ತಾಗಿ ಪರಿಹರಿಸಬೇಕು ಎಂದು ಅವರು ಹೇಳಿದ್ದಾರೆ.

ಸಮಾಲೋಚನೆ ಸುದ್ದಿ
ಕನ್ನಡ ದಿನ ಪತ್ರಿಕೆ
SAMALOCHANE RANEBENNURSUDDI
Kannada Daily Morning

## ಅನ್ನಭಾಗ್ಯ ಅಕ್ಕಿ ವಶ: ಚಾಲಕನ ಬಂಧನ

**ಬಾದಾಮಿ:** ಸರಕಾರದ ವಿವಿಧ ಯೋಜನೆಗಳಲ್ಲಿ ಉಚಿತವಾಗಿ ವಿತರಿಸುವ ಅಕ್ಕಿಯನ್ನು ಕಡಿಮೆ ಬೆಲೆಗೆ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಲು ಬೇಲೂರಿನಿಂದ ಬಾಗಲಕೋಟೆಗೆ ಒಯ್ಯುತ್ತಿದ್ದ ಲಾರಿ ಸಂಖ್ಯೆ ಕೆ.ಎ. 29/ಸಿ.7755 ಇದರಲ್ಲಿ ಇದ್ದ ಅಕ್ರಮ 571 ಅಕ್ಕಿ ಚೀಲಗಳನ್ನು 19975 ಕೆ.ಜಿಯ 4,59,425 ಮೌಲ್ಯದ ಅಕ್ಕಿ ಚೀಲಗಳನ್ನು ಆರೋಪಿಗಳಿಂದ ವಶಕ್ಕೆ ಪಡೆಯಲಾಗಿದೆ. ಚಾಲಕ ಅಬ್ದುಲ ಲತೀಪ್ ಆಗ್ರಾ ಇವನನ್ನು ಪೋಲಿಸರ ವಶಕ್ಕೆ ನೀಡಲಾಗಿದೆ, ಖಚಿತ ಮಾಹಿತಿ ಮೇರೆಗೆ ಆಹಾರ ಇಲಾಖೆಯ ನಿರೀಕಕ ಮಂಜುನಾಥ ರೊಟ್ಟಿ, ಇವರು ಅನಿರೀಕ್ಷಿತವಾಗಿ ದಾಳಿ ಮಾಡಿ ಸರಕಾರದ ಯಾವುದೇ ಅನುನತಿ ಇಲ್ಲದೇ ಮಾರಾಟ ಮಾಡಲು ಯತ್ನಿಸಿದ ಇಬ್ಬರಿಂದ ಅಕ್ಕಿ ವಶಕ್ಕೆ ಪಡೆದು ಇಬ್ಬರ ವಿರುದ್ಧ ಸ್ಥಳೀಯ ಪೊಲೀಸ್ ಠಾಣೆಯನ್ನು ಪ್ರಕರಣ ದಾಖಲಿಸಲಾಗಿದೆ.ಈ ಸಂದರ್ಭದಲ್ಲಿ ಆಹಾರ ನಿರೀಕ್ಷಕ ಶಬ್ಬೀರ ಅಹಮ್ಮದ ಕೊತ್ವಾಲ ಪಂಚರಾದ ಮಾರುತಿ ದಾದಪ್ಪ ಸಾವಂತ, ಶಿವಬಸಪ್ಪ ನಾಗೇಂದ್ರಪ್ಪ ಅಂಗಡಿ ಇದ್ದರು




## ಹರಿಹರ ತಾಲೂಕು ಗ್ರಾಮಾಂತರ ಬಿಜೆಪಿ ಘಟಕಕ್ಕೆ ಎಂ.ಪಿ. ಲಿಂಗರಾಜ್ ಅಧ್ಯಕ್ಷ

**ಹರಿಹರ:** ತಾಲೂಕು ಬಿಜೆಪಿ ಗ್ರಾಮಾಂತರ ಘಟಕದ ಅಧ್ಯಕ್ಷರಾದ ಎಂ. ಪಿ ಲಿಂಗರಾಜ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ, ಬಿಜೆಪಿ ಗ್ರಾಮಾಂತರ ಘಟಕದ ನೂತನ ಪದಾಧಿಕಾರಿಗಳನ್ನು ಆಯ್ಕೆಮಾಡಲಾಗಿದೆ.

ಗ್ರಾಮಾಂತರ ಬಿಜೆಪಿ ಘಟಕದ ಉಪಾಧ್ಯಕ್ಷರುಗಳನ್ನಾಗಿ ಉಮಾ ಮಹೇಶ್ವರ ಕೆ. ಬೇವಿನಹಳ್ಳಿ, ಜಗದೀಶ್ ದೇವರ ಬೆಳಕೆರೆ, ಸಿದ್ದೇಶ್ ಮಲೆಬೆನ್ನೂರ್, ಹಾಲೇಶ್ ಬೇವಿನಹಳ್ಳಿ, ಆಕಾಶ್ ಪಾಮೇನಹಳ್ಳಿ, ಚಂದ್ರಗೌಡ ಉಕ್ಕಡಗಾತ್ರಿ.

ಕಾರ್ಯದರ್ಶಿಗಳನ್ನಾಗಿ ರವಿ ಸಿರಿಗೆರೆ, ಎನ್ ಪ್ರಕಾಶ್, ಗಣೇಶ ರಾಜನಹಳ್ಳಿ, ನಾಗರಾಜ್ ಜಿಗಳಿ, ನಿರಂಜನ್ ಕುಂಬಳೂರು, ಹನುಮಗೌಡ ಟಿ .ಎನ್. ಕೊಕ್ಕನೂರು, ರೈತ ಮೋರ್ಚಾ ಅಧ್ಯಕ್ಷರನ್ನಾಗಿ ಹನಗವಾಡಿ ಪ್ರವೀಣ್, ಪ್ರಧಾನ ಕಾರ್ಯದರ್ಶಿಗಳಾಗಿ ಮಂಜಣ್ಣ ಎಳೆಹೊಳೆ, ಮಾರುತಿ ಚಿಕ್ಕಬಿದರಿ, ಯುವ ಮೋರ್ಚಾ ಅಧ್ಯಕ್ಷರಾಗಿ ನಿರಂಜನ್ ಡಿಟೂರು, ಪ್ರಧಾನ ಕಾರ್ಯದರ್ಶಿಗಳಾಗಿ ಸುನಿಲ್ ಕೋಮಾರನಹಳ್ಳಿ, ಅನಿಲ್ ಕುಮಾರ್ ಯಲವಟ್ಟಿ.

ಓಬಿಸಿ ಮೋರ್ಚಾ ಅಧ್ಯಕ್ಷರಾಗಿ ಲೋಕಿಕೆರಿ ಅಣ್ಣಪ್ಪ, ಪ್ರಧಾನ ಕಾರ್ಯದರ್ಶಿಯಾಗಿ ಪುನೀತ್ ಬೆಳ್ಳೂಡಿ, ವೀರೇಶ್ ಕೆ.ಪಿ, ಎಸ್ಸಿ ಮೋರ್ಚಾ ಅಧ್ಯಕ್ಷರಾಗಿ ಪರಶುರಾಮ್ ದೇವರಬೆಳಕೆರೆ, ಪ್ರಧಾನ ಕಾರ್ಯದರ್ಶಿಗಳಾಗಿ ಕಿಶೋರ್ ಯಲವಟ್ಟಿ, ಕರಿಯಪ್ಪ. ಎಸ್‌ಟಿ ಮೋರ್ಚಾ ಅಧ್ಯಕ್ಷರಾಗಿ ವಿಜಯಕುಮಾರ್ ಕೆ.ಡಿ ಸಲಗನಹಳ್ಳಿ, ಪ್ರಧಾನ ಕಾರ್ಯದರ್ಶಿಗಳಾಗಿ ಮಂಜುನಾಥ್ ಭಾನುವಳ್ಳಿ, ಶ್ರೀಕಾಂತ್ ನಂದಿಗುಡಿ, ಸಾಮಾಜಿಕ ಮಾಧ್ಯಮ ಅರುಣ್ ವಾಸನ, ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಸುನಿತಾ ಧನರಾಜ್ ಕೆ ಎನ್ ಹಳ್ಳಿ, ಅಲ್ಪಸಂಖ್ಯಾತ ಅಧ್ಯಕ್ಷರಾಗಿ ಅಹಮದ್ ಮುಸ್ತಾಫ್ ಭಾನುವಳ್ಳಿ ಆಯ್ಕೆಯಾಗಿದ್ದಾರೆ.



**ಶ್ರೀ ಸುದರ್ಶನ ಚಕ್ರ ಯುವ ಮಂಡಳ 2026ನೇ ಸಾಲಿನ 5ನೇ ವರ್ಷ ಪ್ರತಿಷ್ಠಾಪನೆ ಮಾಡಿದ ಹಿಂದೂ ಮಹಾಗಣಪತಿ ಧರ್ಮಸಭೆಯಲ್ಲಿ ಯುವ ಬ್ರಿಗೇಡ್ ಸಂಸ್ಥಾಪಕ ಚಕ್ರವರ್ತಿ ಸೂಲೆಬೆಲೆ ಅವರು ಆಗಮಿಸಿ ಸಭೆಯನ್ನುದ್ದೇಶಿಸಿ ಮಾತನಾಡಿದರು, ಇದೆ ಸಂದರ್ಭದಲ್ಲಿ ಕನಕದಾಸ ಶಿಕ್ಷಣ ಸಮಿತಿಯ ಚೇರ್ಮನ್ನ, ಭಾರತ ಸರಕಾರದ ಆಹಾರ ನಿಗಮದ ರಾಜ್ಯ ಸದಸ್ಯರಾದ ರವೀಂದ್ರನಾಥ ಬಿ ದಂಡಿನ, ಶ್ರೀಪತಿ ಉಡುಪಿ, ಸುಧೀರ್ ಕಾಟೇಗಾರ, ಮಾನವಿ, ಹಬೀಬ್, ರವಿ ಗುಂಜೀಕರ್, ಹೇಮಾದ್ರಿ ಅವರು ಹಾಗೂ ಇತರೆ ಪ್ರಮುಖ ಮುಖಂಡರು ಸಮಾರಂಭದಲ್ಲಿ ಉಪಸ್ಥಿತರಿದ್ದರು.**

## ಸೇವೆಯ ಮೂಲಕ ಸಮಾಜದ ನಾಡಿಮಿಡಿತ ಅರಿಯುವ ಅವಕಾಶ

**ನರೇಗಲ್ಲ:** ಪುಸ್ತಕದ ಪುಟಗಳಲ್ಲಿ ಕಲಿತ ಪಾಠಕ್ಕಿಂತ, ಸಮಾಜದ ನಡುವೆ ನಿಂತು ಬದುಕನ್ನು ಅರಿಯುವ ಅನುಭವವೇ ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ಗಟ್ಟಿಗೊಳಿಸುತ್ತದೆ. ಅಂತಹ ಅನುಭವ, ಮಾನವೀಯತೆ ಮತ್ತು ಸೇವಾ ಮನೋಭಾವವನ್ನು ಬೆಳೆಸುವ ಅತ್ಯುತ್ತಮ ವೇದಿಕೆಯೇ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಎಂದು ರಾಜ್ಯ ಎನ್‌ಎಸ್‌ಎಸ್ ಪ್ರಶಸ್ತಿ ಪುರಸ್ಕೃತ ಹಾಗೂ ಧಾರವಾಡದ ಸಸ್ಯಶಾಸ್ತ್ರ ಉಪನ್ಯಾಸಕ ಶಿವಯೋಗಿ ಹಾವೇರಿ ಹೇಳಿದರು.

ನರೇಗಲ್ಲ ಪಟ್ಟಣದ ಮರಿಯಪ್ಪ ಬಾಳಪ್ಪ ಕಳಕೊಣ್ಣವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬುಧವಾರ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎನ್‌ಎಸ್‌ಎಸ್‌ನಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದರಿಂದ ಯುವಜನರಲ್ಲಿ ರಾಷ್ಟ್ರೀಯತೆ, ಭಾವೈಕ್ಯತೆ, ಸಹಬಾಳ್ವೆ ಹಾಗೂ ನಾಯಕತ್ವದ ಗುಣಗಳು ಬೆಳೆಯುತ್ತವೆ. ಸೇವೆ ಮಾಡುವ ಕೈಗಳಿಗೆ ಸಮಾಜದ ನೋವು ಕಾಣುತ್ತದೆ; ಆ ನೋವನ್ನು ಅರ್ಥಮಾಡಿಕೊಂಡಾಗ ಮಾನವೀಯತೆ ಮೊಳೆಯುತ್ತದೆ. ಗ್ರಾಮೀಣ ಭಾಗದ ನೈಜ ಬದುಕು, ಜನರ ಸಮಸ್ಯೆಗಳು ಹಾಗೂ ಅವರ ಜೀವನಮಟ್ಟವನ್ನು ಹತ್ತಿರದಿಂದ ಅರಿಯುವ ಮೂಲಕ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ದೃಷ್ಟಿಕೋನದ ಜತೆಗೆ ಸಾಮಾಜಿಕ ಕಳಕಳಿಯೂ ಬೆಳೆಸಿಕೊಳ್ಳಬಹುದು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಡಾ. ಕಸ್ತೂರೆವ್ವ ದಳವಾಯಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಹೊಣೆಗಾರಿಕೆಯನ್ನು ಜಾಗೃತಗೊಳಿಸುವುದೇ ನೈಜ ಶಿಕ್ಷಣದ ಪರಮ ಗುರಿಯಾಗಿದೆ. ವಿದ್ಯಾರ್ಥಿ ಜೀವನದಲ್ಲಿಯೇ ಶಿಸ್ತು, ಸಾಮಾಜಿಕ ಕಳಕಳಿ ಹಾಗೂ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕು. ಬದುಕಿನಲ್ಲಿ ದೊರೆಯುವ ಸುವರ್ಣಾವಕಾಶಗಳನ್ನು ಸದುಪಯೋಗಪಡಿಸಿಕೊಂಡು, ಇಂದಿನ ಸನ್ನಡತೆಯಿಂದ ನಾಳಿನ ಉಜ್ವಲ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಿಕೊಳ್ಳಬೇಕು ಎಂದು ಹೇಳಿದರು.

ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಸುನಂದಾ ಮುಂಜಿ ಮಾತನಾಡಿ, ಗ್ರಾಮೀಣ ಶಿಬಿರಗಳಿಗೆ ತೆರಳಿದಾಗ ಹಳ್ಳಿಗಳ ವಾಸ್ತವ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಅರಿತುಕೊಳ್ಳಬೇಕು. ಅನಕ್ಷರಸ್ಥರು ಹಾಗೂ ಹಿಂದುಳಿದ ವರ್ಗದ ಜನರಲ್ಲಿ ಅಕ್ಷರಜ್ಞಾನ, ಆರೋಗ್ಯ ಸಂರಕ್ಷಣೆ, ಸಂಸ್ಕಾರ ಮತ್ತು ಪರಿಸರ ನೈರ್ಮಲ್ಯದ ಕುರಿತು ಜಾಗೃತಿ ಮೂಡಿಸುವುದು ಎನ್‌ಎಸ್‌ಎಸ್‌ನ ಪ್ರಮುಖ ಆಶಯವಾಗಿದೆ. ಶಿಕ್ಷಣದಿಂದ ದೊರೆಯುವ ಆತ್ಮವಿಶ್ವಾಸವನ್ನು ಸಮಾಜದ ಒಳಿತಿಗಾಗಿ ಬಳಸಿಕೊಂಡು, ವಿದ್ಯಾರ್ಥಿಗಳು ಸಮಾಜಮುಖಿ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು ಎಂದರು. ಈ ಸಂದರ್ಭದಲ್ಲಿ ಎಸ್.ಎಸ್. ಸೂಡಿ, ಅನಿಲಕುಮಾರ, ಶಿವಪ್ಪ ಕುರಬರ, ವಿರೂಪಾಕ್ಷ ಆರ್., ವಿವೇಕಾನಂದ ಹಿರೇಮಠ ಸೇರಿದಂತೆ ಕಾಲೇಜಿನ ಬೋಧಕ–ಬೋಧಕೇತರ ಸಿಬ್ಬಂದಿ ಹಾಗೂ ಎನ್‌ಎಸ್‌ಎಸ್ ಸ್ವಯಂಸೇವಕರು ಉಪಸ್ಥಿತರಿದ್ದರು.



## ಕೊಪ್ಪಳ ಜಿಲ್ಲೆಯಲ್ಲಿ ಕೃಷಿ ಹೊಂಡಗಳ ನಿರ್ಮಾಣ ರೈತರಿಗೆ ವರದಾನ

**ಕೊಪ್ಪಳ** : ಕಲ್ಯಾಣ ಕರ್ನಾಟಕದ ಕೊಪ್ಪಳ ಜಿಲ್ಲೆಯು ಬಹುತೇಕ ಮಳೆಯಾಧಾರಿತ ಕೃಷಿಯನ್ನು ಅವಲಂಬಿಸಿದೆ. ಸದ್ಯದ ಬರಗಾಲದ ಪರಿಸ್ಥಿತಿಯಲ್ಲಿ ಆಶಾಕಿರಣದಂತೆ ಬಂದ ಯೋಜನೆ ಎಂದರೆ ವಿಬಿ–ಜಿ ರಾಮ್–ಜಿ ಯೋಜನೆ. ಈ ಯೋಜನೆಯಡಿ ರೈತರು ಕೃಷಿಹೊಂಡ ನಿರ್ಮಿಸಿಕೊಂಡು ಮಳೆನೀರನ್ನು ಸಂಗ್ರಹಿಸುವುದರ ಮೂಲಕ ತಮ್ಮ ಕೃಷಿ ಭೂಮಿಗೆ ಕೃಷಿಹೊಂಡವನ್ನೇ ವರದಾನವನ್ನಾಗಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಇತ್ತೀಚೆಗೆ ಕುಕನೂರು ತಾಲ್ಲೂಕಿನಲ್ಲಿ ವಿಬಿ–ಜಿ ರಾಮ್–ಜಿ ಯೋಜನೆಯಡಿ ನಿರ್ಮಾಣವಾದ 8 ಕೃಷಿ ಹೊಂಡಗಳು. ಜಿಲ್ಲಾ ಪಂಚಾಯತಿಯ ಕ್ರಿಯಾ ಯೋಜನೆಯಲ್ಲಿ ಜಿಲ್ಲೆಯಾದ್ಯಂತ ಒಟ್ಟು 876 ಕೃಷಿ ಹೊಂಡಗಳಿಗೆ ಯೋಜನೆ ರೂಪಿಸಲಾಗಿದೆ. ಅವುಗಳಲ್ಲಿ ಜಿಲ್ಲೆಯ ಕುಕನೂರು ತಾಲ್ಲೂಕಿನ ಇಟಗಿಯಲ್ಲಿ 6, ಮಂಗಳೂರು ಹಾಗೂ ಬಳಗೇರಿಯಲ್ಲಿ ತಲಾ ಒಂದು ಕೃಷಿಹೊಂಡವನ್ನು ವಿಬಿ–ಜಿ ರಾಮ್–ಜಿ ಯೋಜನೆಯಡಿ ನಿರ್ಮಿಸಲಾಗಿದೆ. ಬಾಕಿ ಕೃಷಿ ಹೊಂಡಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿವೆ. ಜಿಲ್ಲೆಯ ಎಲ್ಲ ರೈತರೂ ವಿಬಿ–ಜಿ ರಾಮ್ ಜಿ ಯೋಜನೆಯಡಿ ತಮ್ಮ ಕೃಷಿಭೂಮಿಯಲ್ಲಿ ಕೃಷಿಹೊಂಡಗಳನ್ನು ನಿರ್ಮಿಸಿಕೊಳ್ಳಬಹುದಾಗಿದೆ.

ಹನಿ ಹನಿ ಸೇರಿದರೆ ಹಳ್ಳ ಎಂಬ ಮಾತಿನಂತೆ ಬರಗಾಲದ ಈ ಪರಿಸ್ಥಿತಿಯಲ್ಲಿ ಅಪರೂಪಕ್ಕೆ ಸುರಿಯುವ ಮಳೆ ನೀರನ್ನು ಸಂಗ್ರಹಿಸಿ, ಕೃಷಿಗೆ ಸದ್ಬಳಕೆ ಮಾಡಿಕೊಳ್ಳಬಹುದು. ಮಳೆಯ ಕೊರತೆ ನಡುವೆ ಕೃಷಿ ಹೊಂಡಗಳು ರೈತರಿಗೆ ನೆರವಾಗಬಲ್ಲವು. ಪ್ರತಿ ಕೃಷಿ ಹೊಂಡಕ್ಕೆ ಸರ್ಕಾರದಿಂದ ರೂ.1,23,000/– ಗಳ ಘಟಕ ವೆಚ್ಚವನ್ನು ಸಹ ನೀಡಲಾಗುತ್ತದೆ. ಇದರಲ್ಲಿ ರೂ.1,14,000/– ಗಳನ್ನು ಕೃಷಿ ಹೊಂಡ ನಿರ್ಮಿಸಲು ಹಾಗೂ ರೂ.8957/– ಗಳನ್ನು ಪೈಪ್‌ಲೈನ್ ಸಂಪರ್ಕಕ್ಕೆ ಬಳಸಿಕೊಳ್ಳಬಹುದು.

> **ನೀರಿನ ಪ್ರತಿ ಹನಿಯೂ ಅತ್ಯಮೂಲ್ಯವಾಗಿದ್ದು, ವೈಜ್ಞಾನಿಕ ಉಪಕ್ರಮದ ಮೂಲಕ ದಿಬ್ಬದಿಂದ ಕಣಿವೆ ಮೂಲಕ ಕೃಷಿಹೊಂಡ ಅನುಷ್ಠಾನಗೊಳಿಸಿ ಮಳೆಗಾಲದಲ್ಲಿ ಓಡುವ ನೀರನ್ನು ನಿಲ್ಲಿಸಿ, ನಿಂತ ನೀರನ್ನು ಇಂಗಿಸಿ, ಅಂತರ್ಜಲ ಪ್ರಮಾಣ ವೃದ್ಧಿಸಿ, ನೀರಿನ ಸದ್ಬಳಕೆಯ ಮಹತ್ವವನ್ನು ಕೃಷಿಹೊಂಡ ನಿರ್ಮಾಣ ಕಾರ್ಯಕ್ರಮದ ಮೂಲಕ ಕಂಡುಕೊಳ್ಳಬಹುದಾಗಿದೆ.**
>
> **। ಡಾ.ಸುರೇಶ ಬಿ.ಇಟ್ನಾಳ, ಜಿಲ್ಲಾಧಿಕಾರಿಗಳು, ಕೊಪ್ಪಳ**
>
> **ವಿಬಿ–ಜಿ ರಾಮ್–ಜಿ ಯೋಜನೆಯಡಿ ಅನುಷ್ಠಾನಗೊಂಡ ಕೃಷಿ ಹೊಂಡ ನಿರ್ಮಾಣ ಕಾರ್ಯಕ್ರಮವು ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣಾ ಕಾಮಗಾರಿಯಾಗಿದ್ದು, ಇದು ರೈತರಿಗೆ ಅತ್ಯುಪಯುಕ್ತವಾಗಿದೆ. ಹೊಲದಲ್ಲಿ ಮಣ್ಣಿನ ಫಲವತ್ತತೆ, ತೇವಾಂಶ, ಮಣ್ಣಿನ ಸವಕಳಿ, ಅಂತರ್ಜಲ ಪ್ರಮಾಣ ವೃದ್ಧಿಗೊಂಡು ರೈತರು ಬರಗಾಲದಲ್ಲಿ, ಬೇಸಿಗೆಯಲ್ಲಿ ಹೆಚ್ಚಿನ ಫಸಲನ್ನು ಬೆಳೆದು, ಆರ್ಥಿಕವಾಗಿ ಸಬಲರಾಗುವಲ್ಲಿ ಸಹಕಾರಿಯಾಗಿದೆ.**
>
> **। ವರ್ಣಿತ್ ನೇಗಿ, ಸಿಇಒ ಜಿಲ್ಲಾ ಪಂಚಾಯತಿ**



## ವಚನ ಲಹರಿಯಲ್ಲಿ ಅರ್ಥ ಪೂರ್ಣ ಸಂದೇಶ: ಮಾಜಿ ಸಚಿವ ಎಸ್.ಎಸ್. ಪಾಟೀಲ

**ಗದಗ:** ಕಪ್ಪತ್ತಗಿರಿ ಫೌಂಡೇಶನ್ (ರಿ.), ಕಳಸಾಪೂರ–ಗದಗ, ಸಾಹಿತ್ಯ, ಶಿಕ್ಷಣ ಹಾಗೂ ಸಾಂಸ್ಕೃತಿಕ ಕಲಾ ವೇದಿಕೆಯ ವತಿಯಿಂದ ಸೆ. 20ರಂದು ಗದಗ ನಗರದ ವಿದ್ಯಾದಾನ ಶಿಕ್ಷಣ ಸಮಿತಿಯ ಶಾಲಾ ಸಭಾಂಗಣದಲ್ಲಿ ಅದ್ದೂರಿ ಶಿಕ್ಷಕರ ಸಮ್ಮೇಳನ, ರಾಜ್ಯಮಟ್ಟದ ವಿಚಾರ ಸಂಕಿರಣ, ಪ್ರಶಸ್ತಿ ಪ್ರದಾನ ಹಾಗೂ ವಿವಿಧ ಕಾರ್ಯಕ್ರಮಗಳು ಅರ್ಥಪೂರ್ಣವಾಗಿ ಜರುಗಿದವು.

ಸಮ್ಮೇಳನದಲ್ಲಿ ಕಪ್ಪತ್ತಗಿರಿ ಫೌಂಡೇಶನ್‌ನ ಸಂಸ್ಥಾಪಕ ಅಧ್ಯಕ್ಷೆ ಶ್ರೀಮತಿ ಚಂದ್ರಕಲಾ ಮ. ಇಟಗಿಮಠ ಅವರ ಸ್ವರಚಿತ 'ವಚನ ಲಹರಿ' ಆಧುನಿಕ ವಚನಗಳ ಗ್ರಂಥವನ್ನು ಮಾಜಿ ಶಾಸಕರಾದ ಎಸ್.ಎಸ್. ಪಾಟೀಲ ಅವರು ಬಿಡುಗಡೆಗೊಳಿಸಿದರು.

ಗ್ರಂಥ ಬಿಡುಗಡೆ ನಂತರ ಮಾತನಾಡಿದ ಎಸ್.ಎಸ್. ಪಾಟೀಲ ಅವರು, "ವಚನ ಲಹರಿಯಲ್ಲಿನ ವಚನಗಳು ಅರ್ಥಪೂರ್ಣ ಸಂದೇಶಗಳನ್ನು ಒಳಗೊಂಡಿವೆ. ಕಳಸಾಪೂರದಂತಹ ಗ್ರಾಮೀಣ ಪ್ರದೇಶದಲ್ಲಿ ಒಬ್ಬ ಮಹಿಳೆ ಸಂಸ್ಥೆಯೊಂದನ್ನು ಹುಟ್ಟುಹಾಕಿ ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಹಿತ್ಯಿಕ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸುತ್ತಿರುವುದು ಹೆಮ್ಮೆಯ ಸಂಗತಿ" ಎಂದು ಹೇಳಿದರು. ಸಂಸ್ಥೆಯ ಕಾರ್ಯಗಳಿಗೆ ತಮ್ಮ ಸಹಾಯ–ಸಹಕಾರ ಸದಾ ಇರುತ್ತದೆ ಎಂದು ತಿಳಿಸಿದರು. ಮಹಿಳಾ ಸಂಘಟನೆಗಳ ಕಾರ್ಯಗಳಿಗೆ ಸಮಾಜದಿಂದ ಹೆಚ್ಚಿನ ಬೆಂಬಲ ದೊರೆಯಬೇಕು ಎಂದರು.

ಕಾರ್ಯಕ್ರಮವನ್ನು ಬಾಗಲಕೋಟೆ ವಿಶ್ವವಿದ್ಯಾಲಯದ ಕುಲಸಚಿವರಾದ ಸೋಮಲಿಂಗ ಗೆಣ್ಣೂರು, ಕೆ.ಎ.ಎಸ್. ಅವರು ಉದ್ಘಾಟಿಸಿದರು. ಶಿಕ್ಷಕರ ಜವಾಬ್ದಾರಿ, ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ, ಅಧಿಕಾರಿಗಳ ದಕ್ಷತೆ ಹಾಗೂ ಮೂಢನಂಬಿಕೆಗಳ ನಿರ್ಮೂಲನೆ ಕುರಿತು ಅವರು ಮಾತನಾಡಿದರು.

ಸಮ್ಮೇಳನದ ಅಧ್ಯಕ್ಷತೆಯನ್ನು ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕ ಹಾಗೂ ಮಕ್ಕಳ ಸಾಹಿತಿ ಡಾ. ನಿಂಗು ಸೊಲಗಿ ಅವರು ವಹಿಸಿದ್ದರು. ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ತಂತ್ರಜ್ಞಾನವನ್ನು ಸವಾಲಾಗಿ ಕಾಣದೆ, ಅದರಲ್ಲಿರುವ ಸಾಧ್ಯತೆಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಅಗತ್ಯವಿದೆ ಎಂದು ಅವರು ಹೇಳಿದರು.



ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಶಹಜಾನ ಮುದಕವಿ ಸಹಾಯಕ ಕುಲಸಚಿವರು ಜನಪದ ವಿಶ್ವವಿದ್ಯಾಲಯ ಗೊಟಗೋಡಿ ಅವರು, ಬೆಳಿಗ್ಗೆ 10ರಿಂದ ಸಂಜೆ 5.30 ರವರೆಗೆ ನಡೆದ ಸಮ್ಮೇಳನದ ಶಿಸ್ತುಬದ್ಧ ನಿರ್ವಹಣೆ, ಪ್ರಶಸ್ತಿ ಪ್ರದಾನ, ವಿಚಾರ ಸಂಕಿರಣದ ವಿವಿಧ ಗೋಷ್ಠಿಗಳು ಹಾಗೂ ಮಕ್ಕಳಿಗೆ ನೀಡಿದ ಗೌರವವನ್ನು ಶ್ಲಾಘಿಸಿದರು. ವೃತ್ತಿಯ ಜೊತೆಗೆ ಸಾಹಿತ್ಯ, ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರಗಳಲ್ಲಿ ಚಂದ್ರಕಲಾ ಇಟಗಿಮಠ ಅವರು ತೊಡಗಿಸಿಕೊಂಡಿರುವುದು ಅಭಿನಂದನಾರ್ಹ ಎಂದು ಹೇಳಿದರು.

**52 ಶಿಕ್ಷಕರಿಗೆ ಪ್ರಶಸ್ತಿ ಪ್ರದಾನ**

ಸಮ್ಮೇಳನದಲ್ಲಿ ರಾಜ್ಯ ಹಾಗೂ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. 32 ಮಂದಿ ಜಿಲ್ಲಾ ಮಟ್ಟದ ಹಾಗೂ 22 ಮಂದಿ ರಾಜ್ಯಮಟ್ಟದ ಅತ್ಯುತ್ತಮ ಶಿಕ್ಷಕರು ಪ್ರಶಸ್ತಿ ಸ್ವೀಕರಿಸಿದರು. ರಾಜ್ಯಮಟ್ಟದ ಕ್ರೀಡಾಕೂಟ–ಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳನ್ನೂ ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಕಪ್ಪತ್ತಗಿರಿ ಫೌಂಡೇಶನ್‌ನ ಸಂಸ್ಥಾಪಕ ಅಧ್ಯಕ್ಷೆ ಶ್ರೀಮತಿ ಚಂದ್ರಕಲಾ ಮ. ಇಟಗಿಮಠ ಅವರು ಸಂಸ್ಥೆಯ ಉದ್ದೇಶ ಹಾಗೂ ಕಾರ್ಯಕ್ರಮದ ಔಚಿತ್ಯದ ಕುರಿತು ಮಾತನಾಡಿ, "ಒಂದು ಸಂಸ್ಥೆ ಬೆಳೆಯಬೇಕಾದರೆ ಹಲವಾರು ಕೈಗಳು ಒಂದಾಗಿ ಜೋಡಿಸಬೇಕು. ಸಂಸ್ಥೆಯ ಕಾರ್ಯಗಳಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಾಯ, ಸಹಕಾರ ನೀಡಿದ ಎಲ್ಲರಿಗೂ ಕೃತಜ್ಞತೆಗಳು" ಎಂದು ತಿಳಿಸಿದರು.

ತಮ್ಮ 'ವಚನ ಲಹರಿ' ಕೃತಿ ತಮ್ಮ ಕನಸಿನ ಮೊದಲ ಪುಸ್ತಕವಾಗಿದ್ದರೂ, ಐದನೇ ಪುಸ್ತಕವಾಗಿ ಹೊರಹೊಮ್ಮಿದೆ. ಆಧುನಿಕ ವಚನಗಳ ಈ ಕೃತಿ ಓದುಗರ ಮೆಚ್ಚುಗೆ ಗಳಿಸಲಿದೆ ಎಂಬ ವಿಶ್ವಾಸವಿದೆ ಎಂದು ಅವರು ಹೇಳಿದರು.

**ರಾಜ್ಯಮಟ್ಟದ ವಿಚಾರ ಸಂಕಿರಣ:** ಸಮ್ಮೇಳನದ ಅಂಗವಾಗಿ ರಾಜ್ಯಮಟ್ಟದ ವಿಚಾರ ಸಂಕಿರಣವೂ ನಡೆಯಿತು. ಡಾ. ಸರ್ವಪಲ್ಲಿ ರಾಧಾಕೃಷ್ಣ ವೇದಿಕೆ ಹಾಗೂ ಸಾವಿತ್ರಿಬಾಯಿ ಫುಲೆ ವೇದಿಕೆಗಳಲ್ಲಿ ತಲಾ ಎರಡು ಗೋಷ್ಠಿಗಳು ಜರುಗಿದವು.

ಸಮಾರೋಪದ ಪ್ರಾರ್ಥನೆಯನ್ನು ಶ್ರೀಮತಿ ವಿಜಯಲಕ್ಷ್ಮೀ ಉಪ್ಪಾರ ನೆರವೇರಿಸಿದರು. ಸ್ವಾಗತವನ್ನು ಶ್ರೀ ಪಕ್ಕೀರೇಶ ಚಕಾರದ ನೆರವೇರಿಸಿದರು. ಕಾರ್ಯಕ್ರಮದ ನಿರೂಪಣೆಯನ್ನು ಕು. ರಾಹುಲ್ ಗಿಡ್ನಂದಿ ಹಾಗೂ ಕು. ರಕ್ಷಿತ ಗಿಡ್ನಂದಿ ಅಚ್ಚುಕಟ್ಟಾಗಿ ನಿರ್ವಹಿಸಿದರು. ಕಾರ್ಯಕ್ರಮದ ಯಶಸ್ಸಿಗೆ ಶ್ರೀಮತಿ ಶಾಂತಾ ಅಂಗಡಿ, ಕಾವ್ಯ ಅಂಗಡಿ, ತೋಟಯ್ಯ ಗುಡ್ಡಿಮಠ, ಮಂಜುನಾಥ ಮುಧೋಳ, ಸುನೀಲ ಲಮಾಣಿ, ಸುಜ್ಞಾನಿ ಪಾಟೀಲ, ಶ್ರೀಮತಿ ಜುಬೇದಾ ನಾಯಕ ಸೇರಿದಂತೆ ಹಲವರು ಸಹಕರಿಸಿದರು.

ಗಣ್ಯರ ಉಪಸ್ಥಿತಿ, ಶಿಕ್ಷಕರ ಸನ್ಮಾನ, ವಿದ್ಯಾರ್ಥಿಗಳ ಗೌರವ, ಕಲೆ–ಸಾಹಿತ್ಯಕ್ಕೆ ಪ್ರೋತ್ಸಾಹ ಹಾಗೂ ರಾಜ್ಯಮಟ್ಟದ ವಿಚಾರ ಸಂಕಿರಣದೊಂದಿಗೆ ಸುಮಾರು ನಾಲ್ಕೈದು ನೂರು ಜನರ ಉಪಸ್ಥಿತಿಯಲ್ಲಿ ಸಮ್ಮೇಳನ ಯಶಸ್ವಿಯಾಗಿ ಸಂಪನ್ನವಾಯಿತು.

SAMALOCHANE RANEBENNURSUDDI KANNADA DAILY MORNING, OWNER, PUBLISHER BY: RAJESHWARI S OLEKAR, PUBLISHED FROM: H.NO, 58 MAIN ROAD, YAKALASAPUR, SUB DISTRICT RANEBENNUR, HAVERI, KARNATAKA-581115, PRINTED AT: VEDAMURTHY S T, GAYATHRI PUBLICATIONS, H.NO, 720, NEKAR COLONY, INDUSTRIAL AREA, HAVERI, KARNATAKA- 581115, EDITOR BY: RAJESHWARI S OLEKAR